ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 12 ಮಾರ್ಚ್ 23, 1980 40 ಪೈಸೆ

ರೂ. 100 ಕ್ಕೆ ಗೇಣಿದಾರರಿಗೆ ಪಟ್ಟಾ

ಗೇಣಿದಾರ ರೈತರಿಗೆ ಟ್ರಿಬ್ಯೂನಲ್ ಮುಂದೆ ಹಾಕಿದ ಅರ್ಜಿ ವಿಚಾರಣೆ ನಡೆದು ಅವರ ಪರವಾಗಿ ತೀರ್ಮಾನವಾಗಿದ್ದರೆ ಆ ರೈತರು ಸರಕಾರಕ್ಕೆ ನೂರು ರೂಪಾಯಿ ಕೊಟ್ಟಲ್ಲಿ ಅವರಿಗೆ ಸರಕಾರವು ಕೂಡಲೇ ಪಟ್ಟಾ ಚೀಟಿ ಕೊಡುವುದೆಂಬುದಾಗಿ ಘೋಷಿಸಲಾಗಿದೆ. ಇದನ್ನೋದಿದ ಲಕ್ಷಾಂತರ ಬಡ ರೈತರು ಸಂತೋಷಪಟ್ಟುಕೊಂಡರು. ಯಾಕೆಂದರೆ ಭೂ ಸುಧಾರಣಾ ಶಾಸನ ದಲ್ಲಿ ರೈತನಿಗೆ ಪಟ್ಟಾ ಸಿಗಬೇಕಾದರೆ 20 ವರ್ಷ ಕಾಯಬೇಕಾಗಿತ್ತು. ನೂರೇ ರೂಪಾಯಿಗೆ ಪಟ್ಟಾ ಸಿಗುವುದೆಂದಾಗ ಯಾರಿಗೆ ತಾನೇ ಸಂತೋಷವಾಗ ಲಿಕ್ಕಿಲ್ಲ? ಇದೊಂದು ಹೊಸ ಸರಕಾರದ ಉಡುಗೊರೆಯೆಂಬುದಾಗಿ ರೈತರಲ್ಲಿ ಭಾವನೆ ಬಂದುದರಲ್ಲಿ ಆಶ್ಚರ್ಯವೇನಿಲ್ಲ.

ಆದರೆ ಈಗ ಸರ್ಕಾರದ ಸ್ಪಷ್ಟೀಕರಣ ಬಂದಿದೆ. ಟ್ರಿಬ್ಯೂನಲ್‌ನಲ್ಲಿ ಜಯ ಗಳಿಸಿದ ಗೇಣಿದಾರ ರೈತ ಕಾನೂನು ಪ್ರಕಾರ 20 ವಾರ್ಷಿಕ ಕಂತುಗಳಲ್ಲಿ ಸರಕಾರಕ್ಕೆ ಕಟ್ಟಬೇಕಾದ ಹಣವನ್ನು ಅವನು ಕಡ್ಡಾಯವಾಗಿ ಕಟ್ಟಲೇ ಬೇಕು. ಅದನ್ನು ಕಟ್ಟದಿದ್ದರೆ ಅವನ ಜಮೀನನ್ನು ಸರಕಾರ ವಶಪಡಿಸಿಕೊಳ್ಳುವುದು. ಭೂಸುಧಾರಣಾ ಶಾಸನದಂತೆ ಅವನು ಸರಕಾರಕ್ಕೆ ಕೊಡಬೇಕಾದ ಹಣವನ್ನು ಸಂಪೂರ್ಣವಾಗಿ ಕೊಟ್ಟ ನಂತರವೇ ಅವನಿಗೆ ಆ ಜಮೀನಿನ ಮೇಲೆ ಸಂಪೂರ್ಣ ಅದಿಕಾರ ದೊರೆಯುವುದು. ಪಟ್ಟಾ ಅವನ ಹೆಸರಿಗಾಗುವುದೆಂದು ಶಾಸನದಲ್ಲಿದೆ. ಈಗ ಆರಂಭದಲ್ಲೇ ರೈತನಿಗೆ ಪಟ್ಟಾ ಕೊಡಲು ಸರಕಾರ ತೀರ್ಮಾನಿಸಿರುವುದು ಸ್ವಾಗತಾರ್ಹವಾಗಿದೆ. ಪಟ್ಟಾದ ಆಧಾರದಲ್ಲಿ ಅವನು ತನ್ನ ಜಮೀನನ್ನು ಅಭಿವೃದ್ಧಿಪಡಿಸಲು, ಸಾಲ ಪಡೆಯಲು ಅನುಕೂಲವಾಗುವುದು. ಆದರೆ

ಸಂಪಾದಕೀಯ

ಅವನು ಸರಕಾರಕ್ಕೆ ಕಟ್ಟಬೇಕಾದ 20 ಕಂತುಗಳ ಹಣದ ಹೊರೆಯಿಂದ ಅವನ ವಿಮೋಚನೆಯಾಗುವುದಿಲ್ಲ. ಅದನ್ನು ಅವನು ಕಟ್ಟಲೇಬೇಕು. ಅದರ ಜೊತೆಗೆ ಈಗ ಪಟ್ಟಾ ಪಡೆಯಲು 100 ರೂಪಾಯಿಯನ್ನು ಸರಕಾರಕ್ಕೆ ಕಟ್ಟಬೇಕಂತೆ. ಇದು ಯಾವ ನ್ಯಾಯವೋ ಗೊತ್ತಾಗದು.

ಶತಮಾನಗಳಿಂದ ಸುಲಿಗೆಗೊಳಗಾದ ಗೇಣಿರೈತರ ಕಷ್ಟಗಳನ್ನು ವಿವರಿಸಲೂ ಸಾಧ್ಯವಿಲ್ಲ. ಭೂ ಸುಧಾರಣಾ ಶಾಸನ ಬಂದರೂ ಲಕ್ಷಾಂತರ ರೈತರು ಭೂಮಾಲೀಕರ ಭಯದಿಂದ ಟ್ರಿಬ್ಯೂನಲ್ ಮುಂದೆ ಅರ್ಜಿಯನ್ನು ಸಹ ಹಾಕಿಲ್ಲ. ಅರ್ಜಿ ಹಾಕಿದ್ದರೂ ಅವರಿಗೆ ಅನುಕೂಲವಾಗುತ್ತಿರಲಿಲ್ಲ. ಯಾಕೆಂದರೆ ತಾವೇ ಸ್ವಂತಸಾಗುವಳಿ ಮಾಡುತ್ತಿದ್ದೇವೆಂಬ ಅರ್ಜಿಯನ್ನು ಭೂಮಾಲೀಕರೇ ಹಾಕಿದ್ದು ಎಲ್ಲ ರಿಕಾರ್ಡನ್ನು ಸರಿಮಾಡಿಕೊಂಡಿದ್ದಾರೆ. ಹಾಕಿದ ಸುಮಾರು 8 ಲಕ್ಷ ಅರ್ಜಿಗಳಲ್ಲಿ ಸುಮಾರು 5 ಲಕ್ಷ ಅರ್ಜಿಗಳು ತೀರ್ಮಾನವಾಗಿವೆಂದು ಸರ್ಕಾರ ಹೇಳಿದೆ ಸಹಸ್ರಾರು ಅಪೀಲುಗಳು ಹೈಕೋರ್ಟ್ ಮುಂದಿವೆ. ಈ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಬಹುಸಂಖ್ಯಾತ ಗೇಣಿದಾರ ರೈತರು ಹಿಂದಿನ ಶೋಷಣೆಗೊಳಗಾಗಿದ್ದು ಕೆಲವರಿಗಷ್ಟೇ ಸ್ವಲ್ಪ ಅನುಕೂಲವಾಗಿದೆ. ಆದರೆ ಅವರಲ್ಲಿ ಎಷ್ಟು ಜನರಿಗೆ ಸರ

(ಕಡೆಯ ಪುಟ ನೋಡಿ)



"ಜೀವನದುದ್ದಕ್ಕೂ ಜನತೆಯೊಂದಿಗೆ ಸೇರಿ, ಜನತೆಯನ್ನು ಸಂಘಟಿಸಿ, ಜನತೆಗಾಗಿ ಹೋರಾಡಿ, ಹೋರಾಟಗಾರನಾಗಿಯೇ ನಮ್ಮನ್ನಗಲಿರುವ ಕಾಂ. ಎ.ಕೆ. ಜಿ.ಯವರು"

ಜನನ : ೧-೧೦-೧೯೦೪ ಮರಣ : ೨೨-೩-೧೯೭೭

ಎ. ಕೆ. ಜಿ. ಸಕ್ರಿಯವಾಗಿ ಭಾಗವಹಿಸಿದ ಮೊದಲ ಸತ್ಯಾಗ್ರಹ

ಗುರುವಾಯೂರು ದೇವಸ್ಥಾನ ಪ್ರವೇಶಕ್ಕಾಗಿ ಹೋರಾಟ ನಡೆದ ವರ್ಷ 1931. ಹೋರಾಟದ ನೇತೃತ್ವವನ್ನು ಶ್ರೀ ಕೇಳಪ್ಪನ್ ವಹಿಸಿದ್ದರೆಂದು ಹೆಸರಿದ್ದರೂ ಕಾಂ. ಎ. ಕೆ. ಗೋಪಾಲನ್‌ರವರು ಕಾರ್ಯಕ್ರಮದ ಪೂರ್ವ ಯೋಜನೆಯನ್ನು ಹಾಕುವುದರಲ್ಲಿ, ಅದನ್ನು ಯಶಸ್ವಿಯಾಗಿ ಜಾರಿ ಮಾಡುವುದರಲ್ಲಿ ಸಕ್ರಿಯವಾಗಿ ಕೆಲಸ ಮಾಡಿದರು. ಹರಿಜನರನ್ನು ಸವರ್ಣೀಯರ ದೇವಸ್ಥಾನವನ್ನು ಪ್ರವೇಶಿಸುವಂತೆ ಮಾಡಿದ್ದಕ್ಕಾಗಿ ಗುರುವಾಯೂರು ಸತ್ಯಾಗ್ರಹ ಪ್ರಸಿದ್ಧಿಯನ್ನು ಪಡೆದಿದೆ.

ಹೋರಾಟದ ನಿಜವಾದ ಉದ್ದೇಶ ಹರಿಜನರನ್ನು ಹಾಗೂ ಬಡಜನತೆಯನ್ನು ರಾಷ್ಟ್ರೀಯ ಹೋರಾಟದ ವಾಹಿನಿಯೊಂದಿಗೆ ಒಯ್ಯುವುದೇ ಆಗಿತ್ತು. ಆ ಸಮಯದಲ್ಲಿ ಕಾಂಗ್ರೆಸ್ಸು ವಿದೇಶಿ ವಸ್ತ್ರಗಳು, ಕುಡಿತದ ವಿರುದ್ಧ ಪಿಕೆಟಿಂಗ್, ಖಾದಿಯ ಪ್ರಚಾರ ಮುಂತಾದ ರಚನಾತ್ಮಕ ಕೆಲಸಗಳಲ್ಲಿ ತೊಡಗಿತ್ತು. ಹಿಂದಿನ ವರ್ಷವೇ ಪ್ರಾರಂಭವಾಗಿದ್ದ ಅಸಂಖ್ಯಾತ ಸಾಮೂಹಿಕ ಸತ್ಯಾಗ್ರಹಗಳ ಪ್ರಚಾರವನ್ನು ರದ್ದುಪಡಿಸಿದ ಗಾಂಧಿ-ಇರ್ವಿನ್ ಒಪ್ಪಂದದ ನಂತರ ಕಾಂಗ್ರೆಸ್ಸಿಗರು ರಚನಾತ್ಮಕ ಕಾರ್ಯಕ್ಕೆ ಇಳಿದಿದ್ದರು.

1930ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ದೇಶಾದ್ಯಂತ ಸಹಸ್ರಾರು ಸ್ವಯಂಸೇವಕರು ಬಂಧಿಸಲ್ಪಟ್ಟರು. ಕಾಂ. ಎ. ಕೆ. ಗೋಪಾಲನ್‌ರವರು ಮಲಬಾರ್ ಪ್ರದೇಶದಲ್ಲಿ ಶ್ರೀ ಕೇಳಪ್ಪನ್‌ರವರ ನೇತೃತ್ವದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಮೂಲಕ ರಾಷ್ಟ್ರೀಯ ಆಂದೋಲನವನ್ನು ಪ್ರವೇಶಿಸಿದ್ದರು. ತಮ್ಮ ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ನೀಡಿ. ಎ. ಕೆ. ಜಿ ಯವರು ತಲ್ಲಿಚೇರಿ ಮತ್ತದರ ಸುತ್ತಮುತ್ತಲ ಪ್ರದೇಶದಲ್ಲಿ ಕಾಂಗ್ರೆಸ್ಸನ್ನು ಕಟ್ಟಲು ಪೂರ್ಣವಾಗಿ ಧುಮುಕಿದರು. ಈ ಸಮಯದಲ್ಲಿ ಹೆಂಡದ ಅಂಗಡಿಗಳ ಮುಂದೆ ಪಿಕೆಟಿಂಗ್, ಖಾದಿಯ ಪ್ರಚಾರವನ್ನು ನಡೆಸುತ್ತಿದ್ದ ಎ. ಕೆ. ಜಿ ಯವರು ಹಳ್ಳಿಯ ಬಡವರು ರಾಷ್ಟ್ರೀಯ ಚಳುವಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸದಿದ್ದುದನ್ನು ಗಮನಿಸಿದರು.

ಬಡವರು ರಾಷ್ಟ್ರೀಯ ಚಳುವಳಿಯನ್ನು ಮೇಲ್ವರ್ಗದವರ ಹಾಗೂ ಮೇಲ್ಜಾತಿಯವರ ಚಳುವಳಿ ಎಂದೇ ನೋಡುತ್ತಿದ್ದರು. ಮಲಬಾರ್ ಪ್ರಾಂತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾಂಗ್ರೆಸ್ ನಾಯಕತ್ವವನ್ನೇ ವಿರೋಧಿಸುತ್ತಿದ್ದರು. ಕಾಂಗ್ರೆಸ್ ನಾಯಕತ್ವವನ್ನು ವಹಿಸಿದ್ದವರು ಶ್ರೀ ಸಾಮ್ಯುಯೇಲ್ ಆರೋನ್, ಶ್ರೀಮತಿ ಆರೋನ್ ಮುಂತಾದವರು. ಅವರೆಲ್ಲಾ ಮಲಬಾರಿನಲ್ಲಿ ಮಿಲ್ಲುಗಳ ಮಾಲೀಕರು, ಉಳಿದವರು ಶ್ರೀಮಂತ ಜಮೀನುದಾರರು. ಖಾದಿ ಬಟ್ಟೆಗಳಿಗಿಂತ ಕಡಿಮೆ ಬೆಲೆಗೆ ಸಿಗುವ ವಿದೇಶಿ ಬಟ್ಟೆಗಳನ್ನು ಕಂಡರೆ ಬಡವರಿಗೆ ಇಷ್ಟ. ಹಾಗೆಯೇ ಶ್ರೀಮಂತರು ಪಿಕೆಟಿಂಗ್ ಮಾಡುತ್ತಿದ್ದ ಹೆಂಡದಂಗಡಿಯ ಪೋಷಕರೂ ಬಡವರೇ ಆಗಿದ್ದರು. ಬಡವರಲ್ಲಿ, ಹರಿಜನರು ಇಂಗ್ಲೀಷಿನವರು ಅಸ್ಪೃಶ್ಯತೆಯನ್ನು ಆಚರಿಸುವುದಿಲ್ಲ ಎಂಬುದನ್ನೂ ಗಮನಿಸಿದ್ದರು. ಭಾರತೀಯರಲ್ಲಿ ಮೇಲ್ಜಾತಿಯವರು ಮಾತ್ರ ಅಸ್ಪೃಶ್ಯತೆಯನ್ನು ಆಚರಿಸುವುದನ್ನು ಕಂಡಿದ್ದ ಅವರು ರಾಷ್ಟ್ರೀಯ ಚಳುವಳಿಯನ್ನು ಸೇರಲು ಒಪ್ಪುತ್ತಿರಲಿಲ್ಲ.

ಕಾಂ. ಎ.ಕೆ.ಜಿ. ಅವರ ಮಧ್ಯೆಯೇ ವಾಸಿಸುತ್ತಿದ್ದರಿಂದ ಅವರ ಭಾವನೆಗಳನ್ನು ಕಂಡುಕೊಂಡರು. ಆದ್ದರಿಂದ, ಬಡವರನ್ನು ಅದರಲ್ಲೂ ಅಸ್ಪೃಶ್ಯರನ್ನು ರಾಷ್ಟ್ರೀಯ ಚಳುವಳಿಗೆ ಸೆಳೆಯಬೇಕೆಂದು ಕಾಂಗ್ರೆಸ್ ಸಂಘಟನೆಯಲ್ಲಿ ವಾದಿಸತೊ

(ಕಡೆಯ ಪುಟ ನೋಡಿ)

ಬೆಳಗಾವಿ :

ಬೆಳಗಾವಿಯಲ್ಲಿ ಭಾರಿ ಪ್ರದರ್ಶನ

ಬೆಲೆ ಏರಿಕೆಯನ್ನು ತಡೆಗಟ್ಟಿರಿ, ಜೀವನಾವಶ್ಯಕ ಸಾಮಗ್ರಿಗಳನ್ನು ಕಡಿಮೆ ಬೆಲೆಗೆ ಒದಗಿಸಿರಿ, ಅನ್ನಕೊಡಿ ಇಲ್ಲವೆ ಅಧಿಕಾರ ಬಿಡಿ, ಕಾರ್ಮಿಕರ ಐಕ್ಯತೆಯು ಚಿರಾಯುವಾಗಲಿ ಎಂದು ಕನ್ನಡ, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚಿಗೆ ಕಾರ್ಮಿಕರು ಮತ್ತು ರೈತರಿಂದ ಸೇರಿದ್ದ ಮೆರವಣಿಗೆಯು ದಿನಾಂಕ 14-3-80ರಂದು ಸಂಜೆ ಬೆಳಗಾವಿ ನಗರದ ಮುಖ್ಯ ಬೀದಿಗಳನ್ನು ಹಾಯ್ದು, ಸುಮಾರು ಆರೂವರೆ ಘಂಟೆಗೆ ಜೆಂಡಾ ಚೌಕವನ್ನು ಸೇರಿತು. ಬೆಲೆಏರಿಕೆ ವಿರುದ್ಧ ಪ್ರತಿಭಟನೆ ಸೂಚಿಸಿ ಸರಕಾರದ ಮೇಲೆ ಒತ್ತಾಯ ತರಲು ನಡೆದ ಈ ಕಾರ್ಯಕ್ರಮವನ್ನು ಸಿ. ಐ. ಟಿ. ಯು. ಮತ್ತು ಎ. ಐ. ಟಿ. ಯು. ಸಿ. ಗಳು ಜಂಟೀಯಾಗಿ ನಡೆಸಿದ್ದುವು. ಇತ್ತೀಚೆಗೆ ಸಿ. ಐ. ಟಿ ಯು. ವಿಗೆ ಸೇರಿದ ಇಂಡಾಲ್ ಕಾರ್ಮಿಕರ ಸಂಘವು ಇದರಲ್ಲಿ ಮುಖ್ಯ ಪಾತ್ರವಾಗಿತ್ತು.

ಜೆಂಡಾ ಚೌಕದಲ್ಲಿ ಸೇರಿದ್ದ ಭಾರಿ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿ. ಐ. ಟಿ. ಯು. ವಿಗೆ ಸೇರಿದ ಇಂಡಾಲ್ ಕಾರ್ಮಿಕರ ಸಂಘದ ಮುಖಂಡ ಕಾಂ. ನಾಗಯ್ಯ ವಹಿಸಿದ್ದರು. ಮೊದಲು ಮಾತನಾಡಿದ ಇದೇ ಯೂನಿಯನ್ನಿನ ಮುಖಂಡ ಕಾಂ. ಎಸ್. ಎಮ್. ಯಾಹ್ಯಾ ಅವರು ಕಾರ್ಮಿಕರು ಕೇವಲ ಅವರ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರವೇ ಹೋರಾಡಿದರೆ ಸಾಲದು. ಜನತೆಯ ಸಮಸ್ಯೆಗಳ ಬಗ್ಗೆಯೂ ಹೋರಾಡಿ, ಜನತೆಗೆ ಮುಂದಾಳುತ್ವವನ್ನಿತ್ತು ಸಮಾಜವನ್ನು ಬದಲಾಯಿಸಬೇಕೆಂದರು. ಇಂಡಾಲ್ ಕಾರ್ಮಿಕರ ಸಂಘವು ತನ್ನ ಈ ಜವಾಬ್ದಾರಿಯನ್ನರಿತು ಸುತ್ತು ಮುತ್ತಲಿನ ಹಳ್ಳಿಯ ಬಡವರ, ರೈತರ ಮತ್ತು ನಗರದ ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಹೋರಾಡಲು ಮುಂದಾಗಿದೆ ಎಂದರು.

ಇಂಡಾಲ್ ಕಾರಖಾನೆಯ ಮಾಲಕರ ಅಜಾಗರೂಕತೆಯಿಂದಾಗಿ, ತೊಂದರೆಗೊಳಗಾದ ನೆರೆಯ ಗ್ರಾಮಗಳ ರೈತ ಮುಖಂಡರು ಮಾತನಾಡಿ, ಸರಕಾರವು ತಮ್ಮ ಕಷ್ಟಗಳನ್ನು ನಿವಾರಿಸುವುದರಲ್ಲಿ ವಿಫಲವಾಗಿದೆ ಎಂದರು. ಈಗ ರೈತರು ಕಾರ್ಮಿಕರ ಸಹಕಾರದಿಂದ ಹೋರಾಡಲು ಮುಂದಾಗಲು ಕರೆ ಇತ್ತರು.

ಬೆಲೆಏರಿಕೆಗೆ ಕಾರಣವು ಸರಕಾರವು ಅನುಸರಿಸುವ ತಪ್ಪು ಆರ್ಥಿಕ ನೀತಿಗಳೆಂದೂ, ಖೋತಾ ಬಜೆಟ್ಟು, ಹೆಚ್ಚಿಗೆ ತೆರಿಗೆ ವಿಧಿಸುವುದು ಇವೇ ಕಾರಣಗಳಿಂದ ಹಣದುಬ್ಬರ ಮತ್ತು ಬೆಲೆಏರಿಕೆಗಳಾಗುವವೆಂದ ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಸಿ. ನಂಜುಂಡಪ್ಪನವರು ಹೇಳಿದರು. ಮುಂದೆ ಕಾರ್ಮಿಕ ವರ್ಗದ ಮೇಲೆ ತೀವ್ರ ಆಕ್ರಮಣ ಬರಲಿದ್ದು ಕಾರ್ಮಿಕ ವರ್ಗವು ಐಕ್ಯಹೋರಾಟ ಮಾಡಲು ಮತ್ತು ರಾಷ್ಟ್ರದಲ್ಲಿ ಎಡ ಪ್ರಜಾಪ್ರಭುತ್ವ ಬದಲಿಯನ್ನು ರಚಿಸಲು ಮುಂದಾಗಲು ಕರೆ ಇತ್ತರು.

ಜನತೆಯು ಶಾಸಕರುಗಳನ್ನು ಆರಿಸಿ ಕಳುಹಿಸುವುದು ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಲು ವಿನಹ ಅವರ ಸ್ವಂತ ಲಾಭಕ್ಕಾಗಿ ಮತ್ತು ಅಧಿಕಾರ ದುರುಪಯೋಗಕ್ಕಲ್ಲ. ಇಂದು ಜನತೆಯನ್ನು ಮರೆತಿರುವ ಶಾಸಕರು, ಮಂತ್ರಿಗಳು ಬರುವಾಗ ಜನತೆಯು ಎಚ್ಚತ್ತು ಪ್ರತಿಭಟಿಸಬೇಕು. ಬೆಲೆ ಏರಿಕೆಗೆ ಕಾರಣ ನಮಗೆ ಸ್ವಾತಂತ್ರ ದೊರೆತ ಮೇಲೆ ನಮ್ಮನ್ನಾಳಿಕೊಂಡು ಬಂದಿರುವ ಸರಕಾರಗಳು ಅನುಸರಿಸಿರುವ ಬಂಡವಾಳಶಾಹಿ ಭೂಮಾಲಕ ಪರವಾದ ಆರ್ಥಿಕ ನೀತಿ. ಇದನ್ನು ಸಂಪೂರ್ಣ ಬದಲಾಯಿಸದೆ, ಸಮಸ್ಯೆಗಳಿಗೆ ಪರಿಹಾರವಿಲ್ಲ ತ್ರಿಪುರಾ, ಪಶ್ಚಿಮ ಬಂಗಾಲ, ಕೇರಳ ರಾಜ್ಯಗಳಂತೆ ಎಲ್ಲಾ ರಾಜ್ಯಗಳಲ್ಲೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಬಲಿಷ್ಟಗೊಂಡು, ಕಾರ್ಯಕ್ರಮ ಮತ್ತು ಹೋರಾಟದ ಮೂಲಕ ಒಂದಾದರೇನೆ ರಾಷ್ಟ್ರದಲ್ಲಿ ಬದಲಿ ಬರುವುದು ಸಾಧ್ಯ. ಜನತೆಯಸಮಸ್ಯೆಗಳಿಗೆಪರಿಹಾರಸಾಧ್ಯ. ಈ ದಿಸೆಯಲ್ಲಿ ನಾವೆಲ್ಲಾ ಶ್ರಮಿಸಬೇಕಾಗಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಕರೆ ಇತ್ತರು.

ಸಭೆಯಲ್ಲಿ ಭಾಷಣ ಮಾಡಿದ ರಾಜ್ಯ ಎ. ಐ. ಟಿ. ಯು. ಸಿ. ಉಪಾಧ್ಯಕ್ಷ ಕಾಂ. ಕೆ. ಪಿ. ಮೆಣ್ಸೆ, ಸ್ಥಳೀಯ ಸಿ. ಪಿ. ಐ. ಮುಖಂಡ ಕಾಂ. ವಿಜಯ ಕುಮಾರ್ ಮೊದಲಾದವರು ಭಾಷಣ ಮಾಡಿ ಐಕ್ಯಹೋರಾಟವನ್ನ ನಡೆಸಲು ಕರೆ ಇತ್ತರು. ರಾಷ್ಟ್ರದಲ್ಲಿ ಒಂದು ಎಡಪ್ರಜಾಪ್ರಭುತ್ವ ಬದಲಿಯನ್ನು ತರುವತ್ತ ಒಂದಾಗಿ ಶ್ರಮಿಸಲು ಕರೆ ಇತ್ತರು. ಅಧ್ಯಕ್ಷರ ಭಾಷಣದೊಡನೆ ರಾತ್ರ 9 ಗಂಟೆಗೆ ಸಭೆಯು ಮುಕ್ತಾಯವಾಯಿತು.

ಸಿ. ಐ. ಟಿ. ಯು ಮತ್ತು ಸಿ. ಪಿ. ಐ (ಎಂ) ಗಳು ಭಾಗವಹಿಸಿದ್ದ ಈ ಸಭೆಯು ಬೆಳಗಾವಿಯ ಚರಿತ್ರೆಯಲ್ಲಿ ಇದೇ ಮೊದಲಿನದ್ದಾಗಿದೆ.

○

ಇಂಡಾಲ್ ಯೂನಿಯನ್ನಿನ ಆಫೀಸು ಉದ್ಘಾಟನೆ

ಇತ್ತೀಚೆಗೆ ಕಾಂ. ಆರ್. ಜಿ. ಸ್ಥಳೇಕರರವರು ಅಧ್ಯಕ್ಷರಾದ ಮೇಲೆ ಸಿ. ಐ. ಟಿ. ಯು. ವಿಗೆ ಸೇರಿದ ಬೆಳಗಾವಿಯ ಇಂಡಾಲ್ ಕಾರ್ಮಿಕರ ಸಂಘದ ಆಫೀಸಿನ ಉದ್ಘಾಟನೆಯು 13-3-1980ರಂದು ಸಂಜೆ ಸಿ.ಐ.ಟಿ.ಯು. ವಿನ ಧ್ವಜಾರೋಹಣ ಮಾಡುವುದರ ಮೂಲಕ ನಡೆಯಿತು. ಸಿ. ಐ. ಟಿ. ಯು. ವಿನ ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿಯವರಾದ ಕಾಂ. ಸಿ. ನಂಜುಂಡಪ್ಪನವರು ಆಫೀಸು ಕಟ್ಟಡದೆದುರು ಧ್ವಜಾರೋಹಣ ಮಾಡಿ, ಸಿ. ಐ. ಟಿ. ಯು. ವಿನ ನೇತೃತ್ವದಲ್ಲಿ ಒಂದಾಗಿ ಹೋರಾಡಲು ಕಾರ್ಮಿಕ ವರ್ಗಕ್ಕೆ ಕರೆ ಇತ್ತರು.

●

ತೋಟ ಕಾರ್ಮಿಕರಿಂದ ಬೇಡಿಕೆ ದಿನಾಚರಣೆ

ಬೆಲೆ ಏರಿಕೆಯ ವಿರುದ್ಧ ಮತ್ತು ಇತರ ಬೇಡಿಕೆಗಳ ಒತ್ತಾಯಕ್ಕಾಗಿ ಬೇಡಿಕೆ ದಿನಾಚರಣೆಯನ್ನು ಮಾರ್ಚ ಹನ್ನೆರಡರಂದು ಆಚರಿಸಬೇಕೆಂದು ಸಿ ಐ ಟಿ ಯು ರಾಜ್ಯ ಸಮಿತಿ ಕರೆ ಕೊಟ್ಟಿತ್ತು. ಇದಕ್ಕೆ ಅನುಗುಣವಾಗಿ ಹಾಸನ ಜಿಲ್ಲೆಯಲ್ಲಿ ಬೇಡಿಕೆಗಳ ದಿನವನ್ನು ಆಚರಿಸಲಾಯಿತು. ಕರ್ನಾಟಕ ತೋಟ ಕಾರ್ಮಿಕರ ಸಂಘ ಮತ್ತು ಕಾಫಿ ಕ್ಯೂರಿಂಗ್ ಕಾರ್ಮಿಕರ ಪರವಾಗಿ ಬೇಡಿಕೆಗಳನ್ನು ಒತ್ತಾಯಿಸುವ ಮನವಿ ಪತ್ರವೊಂದನ್ನು ಹಾಸನದ ಜಿಲ್ಲಾಧಿಕಾರಿಯವರಿಗೆ ಅರ್ಪಿಸಲಾಯಿತು. ನಂತರ ಅವರ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಯಿತು.

ಅನೇಕ ತೋಟಗಳಿಂದ ಬಂದ ನೂರಾರು ತೋಟ ಕಾರ್ಮಿಕರು ಬೇಡಿಕೆಗಳ ಬಗ್ಗೆ ಘೋಷಣೆಗಳನ್ನು ಕೂಗುತ್ತಾ ಸಕಲೇಶಪುರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಅಲ್ಲಿನ ಉಪವಿಭಾಗಾಧಿಕಾರಿಯವರ ಕಛೇರಿಯ ಮುಂದೆ ಮತಪ್ರದರ್ಶನ, ಧರಣಿ ನಡೆಯಿತು. ತಹಸೀಲ್ದಾರರು ಮನವಿಯನ್ನು ಸ್ವೀಕರಿಸಿದರು.

ಸಂಜೆ ತೋಟಕಾರ್ಮಿಕರ ಸಂಘದ ಕಛೇರಿಯ ಮುಂದೆ ನಡೆದ ಸಭೆಯಲ್ಲಿ ತಾತಗುಣಿ ಎಸ್ಟೇಟ್ ಕಾರ್ಮಿಕರ, ಚೆಟ್ಟಳ್ಳಿಯ ಕೈಗಾರಿಕಾ ಸಂಶೋಧನ ಕೇಂದ್ರದ ಕಾರ್ಮಿಕರ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯ ನೌಕರರ ಹೋರಾಟಕ್ಕೆ ಬೆಂಬಲ ನೀಡುವ ನಿರ್ಣಯ ಕೈಗೊಳ್ಳಲಾಯಿತು.

●

ಆಟೋರಿಕ್ಷಾ ಚಾಲಕರ ಪ್ರಥಮ ಸಮ್ಮೇಳನ

ಆಟೋರಿಕ್ಷಾ ಚಾಲಕರ ಸಂಘದ ಪ್ರಥಮ ಸಮ್ಮೇಳನವು ಮಾರ್ಚ ಹದಿಮೂರರಂದು ಬೆಂಗಳೂರಿನಲ್ಲಿ ನಡೆಯಿತು. ಕರ್ನಾಟಕದ ಕಾರ್ಮಿಕ ಸಚಿವರಾದ ಶ್ರೀ ಸಿ. ಎಂ. ಇಬ್ರಾಹಿಂ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಶಾಸಕ ಪಿ.ರಾಮದೇವ್, ಮಂಗಳೂರಿನ ಆಟೋಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಪಿ. ಸುರೇಶ್ ಮಲ್ಯ, ಕೆ. ಎ. ಹುಸೇನ್, ಪಿ ಕೆ. ಸುಬ್ರಮಣಿ ಅವರು ಸಮ್ಮೇಳನದಲ್ಲಿ ಮಾತನಾಡಿದರು. ಸಂಘದ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್ ಅವರು ಎಲ್ಲ ಚಾಲಕರೂ ಈ ಸಂಘಕ್ಕೆ ಸೇರಿ ಬಲಪಡಿಸಬೇಕೆಂದು ಕರೆ ಕೊಟ್ಟರು. ಸಮ್ಮೇಳನದಲ್ಲಿ ಸಂಘದ ಪದಾಧಿಕಾರಿಗಳನ್ನು ಚುನಾಯಿಸಲಾಯಿತು. ಎಸ್. ಸೂರ್ಯನಾರಾಯಣ ರಾವ್ ಅವರು ಅಧ್ಯಕ್ಷರಾಗಿಯೂ, ಕೆ. ಎ. ಹುಸೇನ್, ಪಿ. ಜಗನ್ನಾಥ್, ಎಂ. ಮುನಿನಂಜಪ್ಪ ಅವರು ಉಪಾಧ್ಯಕ್ಷರಾಗಿಯೂ, ಪಿ. ಕೆ. ಸುಬ್ರಮಣಿ ಅವರು ಪ್ರಧಾನ ಕಾರ್ಯದರ್ಶಿಯಾಗಿಯೂ, ಜಿ. ಸುಬ್ಬರಾವ್ ಮತ್ತು ಎ ವಿ ರಮೇಶ್ ಅವರು ಉಪಕಾರ್ಯದರ್ಶಿಗಳಾಗಿಯೂ, ಅಬ್ದುಲ್ ಲೀಮ್ ಮತ್ತು ಕೆ. ಆರ್. ರಾಜಗೋಪಾಲ್ ಅವರು ಸಹಕಾರ್ಯದರ್ಶಿಗಳಾಗಿಯೂ, ಬಿ ಕೆ. ನಾಗರಾಜ್ ಅವರು ಖಜಾಂಚಿಯಾಗಿಯೂ ಮತ್ತು 27 ಜನ ಸಮಿತಿಯ ಸದಸ್ಯರಾಗಿಯೂ ಚುನಾಯಿತರಾದರು.

23-3-78 ರಂದು ಪೋಲೀಸರು 22 ಮಂದಿ ರಿಕ್ಷಾಚಾಲಕರ ಮೇಲಿನ ಮೊಕದ್ದಮೆಯನ್ನು ವಾಪಸ್ಸು ತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುವುದು. ಆಟೋರಿಕ್ಷಾ ಉದ್ಯಮವನ್ನು ಅಗತ್ಯ ಸೇವಾಕಾಯಿದೆಗೆ ಒಳಪಡಿಸುವ ಪ್ರಯತ್ನವನ್ನು ಕೈಬಿಡುವಂತೆ ಸರ್ಕಾರಕ್ಕೆ ಕೇಳಿಕೊಳ್ಳುವುದು, ಕನಿಷ್ಠದರ, ಕಿಲೋಮೀಟರ್ ದರ, ಅನುಮತಿಸಿರುವ ಪ್ರಯಾಣಿಕರ ವಿವರಣೆ, 100 ಕಿ. ಜಿ. ಲಗ್ಗೇಜಿಗೆ ಅನುಮತಿ ಬಗ್ಗೆ ಸರ್ಕಾರದ ತೀರ್ಮಾನಗಳ ಒಂದು ಖಾಯಂ ಪಟ್ಟಿಯನ್ನು ಎಲ್ಲ ಆಟೋಗಳಿಗೆ ಹಂಚುವುದು, ಚಾಲಕರ ಮೇಲಿನ ಜುಲ್ಮಾನೆಯನ್ನು ವರಮಾನಕ್ಕನುಗುಣವಾಗಿ ವಿಧಿಸುವುದು ಮುಂತಾದ ನಿರ್ಣಯಗಳನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು. ತಾತಗುಣಿ ಎಸ್ಟೇಟ್, ಸಂಯುಕ್ತ ಕರ್ನಾಟಕ ನೌಕರರ ಹೋರಾಟವನ್ನು ಸರ್ಕಾರ ಪರಿಶೀಲಿಸಿ ನ್ಯಾಯ ದೊರಕಿಸಬೇಕೆಂದು ಸಮ್ಮೇಳನ ಒತ್ತಾಯಿಸಿತು. ಆಟೋರಿಕ್ಷಾ ಚಾಲಕರ ಸಂಘವನ್ನು ಸಿ. ಐ. ಟಿ. ಯು.ಗೆ ಸಂಯೋಜಿಸಲು ಸಮ್ಮೇಳನ ಸರ್ವಾನುಮತದಿಂದ ತೀರ್ಮಾನಿಸಿತು.

○

ಮಂಗಳೂರಿನಲ್ಲಿ ಬೇಡಿಕೆ ದಿನಾಚರಣೆ

ರಾಜ್ಯ ಸಿ ಐ ಟಿ ಯು ವಿನ ಕರೆಗೆ ಅನುಗುಣವಾಗಿ ಮಾರ್ಚ ಹನ್ನೆರಡರಂದು ಮಂಗಳೂರಿನ ಜಿಲ್ಲಾಧಿಕಾರಿಯವರ ಕಛೇರಿಯ ಎದುರು ಕಾರ್ಮಿಕರಿಂದ ಸತ್ಯಾಗ್ರಹ ನಡೆಯಿತು. ಸಕ್ಕರೆ, ಸೀಮೆಎಣ್ಣೆ ವಿತರಣೆ ಸರಿಯಾಗಿ ನಡೆಯಲೆಂಬ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಲಾಯಿತು. ಸಂಜೆ ಮಂಗಳೂರಿನ ನೆಹರು ಮೈದಾನದಲ್ಲಿ ಸಭೆ ನಡೆಯಿತು. ಇದರ ಅಧ್ಯಕ್ಷತೆಯನ್ನು ದ. ಕ. ಜಿಲ್ಲಾ ಹೆಂಚು ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಬಿ. ಕೊರಗಪ್ಪ ರೈ ಅವರು ವಹಿಸಿದ್ದರು. ಜಿಲ್ಲಾ ಸಿ.ಐ.ಟಿ.ಯು.ವಿನ ಸಂಚಾಲಕರಾದ ಕಾಂ. ಕೆ. ಮೂಸಬ್ಬ ಅವರು ಮನವಿಯ ಉದ್ದೇಶಗಳನ್ನು ಸಭೆಗೆ ವಿವರಿಸಿದರು. ರೈತ ಕಾರ್ಮಿಕ ಮುಖಂಡರಾದ ಕಾಂ. ಪಿ. ರಾಮಚಂದ್ರರಾಯರು ಸಂಘಟಿತ ಕಾರ್ಮಿಕರು ಚಳುವಳಿಯ ಮುಂಚೂಣಿಗೆ ಬರಬೇಕು ಎಂದು ಕರೆಕೊಟ್ಟರು. ಕೊನೆಯಲ್ಲಿ ಕಾಂ. ಕಮಲಾಕ್ಷ ಬಂಗೇರರು ಧನ್ಯವಾದ ಅರ್ಪಿಸಿದರು.

●

ಶಿಡ್ಲಘಟ್ಟದಲ್ಲಿ ಬೇಡಿಕೆ ದಿನಾಚರಣೆ

ದಿನಾಂಕ 12-3-1980ರ ಬುಧವಾರ ಬೇಡಿಕೆಗಳ ದಿನದ ಅಂಗವಾಗಿ ಸಿ. ಐ. ಟಿ. ಯು. ರಾಜ್ಯಸಮಿತಿಯ ಆದೇಶದ ಮೇರೆಗೆ ಶಿಡ್ಲಘಟ್ಟ ತಾಲ್ಲೂಕು ಕಛೇರಿಯ ಮುಂಭಾಗದಲ್ಲಿ ಬೆಳಿಗ್ಗೆ 10-30 ರಿಂದ ಸಂಜೆ 5ರವರೆಗೆ ಧರಣಿ ಸತ್ಯಾಗ್ರಹ ನಡೆಸಿ ಕೊನೆಯಲ್ಲಿ 9 ಬೇಡಿಕೆಗಳುಳ್ಳ ಮನವಿಪತ್ರವನ್ನು ತಹಸೀಲ್‌ದಾರರವರಲ್ಲಿ ಸಲ್ಲಿಸಲಾಯಿತು. ನಂತರ ನಡೆದ ಸಭೆಯಲ್ಲಿ ಕಾಂ. ಎನ್. ಮಣಿ, ಎಂ. ಎನ್. ವೆಂಕಟರಮಣ ಹಾಗೂ ಇತರರು ಬೇಡಿಕೆಗಳ ಬಗ್ಗೆ ವಿವರಣೆ ನೀಡಿ ಸರ್ಕಾರವು ಈ ಕೂಡಲೇ ಕಾರ್ಮಿಕರ ಬೇಡಿಕೆಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿ ಮಾತನಾಡಿದರು.

●

ಪುಟ್ಟ ರಾಜ್ಯದಲ್ಲೊಂದು ದೊಡ್ಡ ಪಾರ್ಟಿ :

ತ್ರಿಪುರಾ ಬಗ್ಗೆ ವಿಶೇಷ ಲೇಖನ

ಕಲ್ಕತ್ತೆಯ ವಿಮಾನ ನಿಲ್ದಾಣ: ಅಗರ್ತಲಾ ವಿಭಾಗದಲ್ಲಿ ಯಾವಾಗಲೂ ಜನಸಂದಣಿ ಹೆಚ್ಚು. ವಿಮಾನ ನಿಲ್ದಾಣಗಳಲ್ಲಿ ಸಾಮಾನ್ಯವಾಗಿ ಕಾಣುವ ಕೆಂಪು ಮೂತಿಯ, ಬೊಜ್ಜು ಹೊಟ್ಟೆಯ ಸೂಟುಧಾರಿಗಳಾಗಲೀ ಅಥವಾ ಯುಡೇಕೊಲೀನ್ ಲೇಪಿತ ಜೀನ್ಸ್‌ಧಾರಿ ಹೆಣ್ಣುಗಳಾಗಲೀ ಅಲ್ಲಿ ಹೆಚ್ಚು ಕಣ್ಣಿಗೆ ಬೀಳುವುದಿಲ್ಲ. ಬದಲಿಗೆ ಹಳೆಯ ಟ್ರಂಕು, ಮಾಸಿದ ಹೋಲ್ಡಾಲ್ ಬಟ್ಟೆಯ ಕೈಚೀಲ ಹಿಡಿದ ಕೆಳ ಮಧ್ಯಮ ವರ್ಗದ ಜನ ಅಲ್ಲಿ ತುಂಬಿರುತ್ತಾರೆ. ಉತ್ತರ ಭಾರತದ ಯಾವುದೇ ರೈಲ್ವೆ ನಿಲ್ದಾಣದಲ್ಲಿ ಕಾಣುವ ಸಾಮಾನ್ಯ ದೃಶ್ಯ ಇಲ್ಲಿ ವಿಮಾನ ನಿಲ್ದಾಣದಲ್ಲಿ ಕಾಣುತ್ತದೆ. ತ್ರಿಪುರಾಗೆ ಹೊರಟಿದ್ದ ನಾನು ಕಲ್ಕತ್ತೆಯ ವಿಮಾನ ನಿಲ್ದಾಣಕ್ಕೆ ಬಂದು ಅಗರ್ತಲಾ ವಿಭಾಗದ ಸರಂಜಾಮು ತೂಕಮಾಡುವಕಡೆ ಹೋದಾಗಕಂಡಈ ವಿಚಿತ್ರ ದೃಶ್ಯ ನನ್ನನ್ನ ಆಶ್ಚರ್ಯಚಕಿತನನ್ನಾಗಿಸಿತು. ಸಾಕಷ್ಟು ಉದ್ದ ಇದ್ದ ಲಗ್ಗೇಜ್ ಕ್ಯೂನಲ್ಲಿ ನನ್ನ ಸೂಟ್‌ಕೇಸ್ ಇಟ್ಟು ಕಾಯುತ್ತಾ ನಿಂತೆ. ಸಂಸಾರ ವಂದಿಗನಾಗಿ ಹೊರಟಿದ್ದ ಮಧ್ಯಮ ವರ್ಗದ ವ್ಯಕ್ತಿಯೊಬ್ಬ ತಲೆಕೆಡಿಸಿಕೊಂಡು ಅತ್ತ ಇತ್ತ ಓಡಾಡುತ್ತಿದ್ದ. ಒಂದೇ ಸೂಟ್‌ಕೇಸ್ ಹಿಡಿದು ಬಂದ ನನ್ನನ್ನು ಕಂಡು ಆ ವ್ಯಕ್ತಿ ಹತ್ತಿರ ಬಂದು ಹಲ್ಲು ಕಿರಿದ. ತನ್ನಲ್ಲಿದ್ದ ಅಪಾರ ಲಗೇಜನ್ನ ಹೇಗಾದರೂ ಮಾಡಿ ಹೆಚ್ಚಿನ ಚಾರ್ಜ್ ಕೊಡದೆ ಸಾಗಿಸುವ ಹವಣಿಕೆಯಲ್ಲಿ ಆತ, ಹಳೆಯ ತಗಡಿನ ಟ್ರಂಕೊಂದನ್ನ ನನ್ನ ಮುಂದೆ ಒಡ್ಡಿ 'ನಿಮ್ಮ ಲಗ್ಗೇಜ್ 20 ಕೆ. ಜಿ. ಗಿಂತ ಕಡಿಮೆ ಇರುವ ಹಾಗಿದೆ ನನ್ನದೊಂದು ಟ್ರಂಕನ್ನ ನೀವು ತಂದರೆ ಒಳ್ಳೆಯದಿತ್ತು' ಎಂದು ಗೋಗರೆದ. ಸ್ಮಗ್ಲಿಂಗ್ ಇತ್ಯಾದಿಗಳ ಬಗ್ಗೆ ಹೆದರಿಕೆ ಇದ್ದ ನಾನು ಹಿಂದೆ ಮುಂದೆ ನೋಡಿದೆ ಆತ ಅರ್ಥವಾದವನಂತೆ ಪೆಟ್ಟಿಗೆಯನ್ನ ಅನಾಮತ್ತನೆ ನೆಲಕ್ಕಿಟ್ಟು, ಪೆಟ್ಟಿಗೆ ಬಾಗಿಲು ತರೆದು ತನ್ನ ಆಸ್ತಿಯನ್ನ ಪ್ರದರ್ಶನಮಾಡಿದ. ಮಕ್ಕಳ ಬಟ್ಟೆಗಳು, ಒಂದೆರಡು ಪಾತ್ರೆ, ಹಳೆಯ ಕ್ಯಾಲೆಂಡರ್, ಮಕ್ಕಳ ಸ್ಕೂಲಿನ ಪುಸ್ತಕ ಇತ್ಯಾದಿಗಳನ್ನ ತೆರೆದು ತೋರಿಸಿ ಧೈನ್ಯದಿಂದ ನನ್ನತ್ತ ನೋಡಿದ. ಅಂತೂ ನನ್ನ ಪುಟ್ಟ ಸೂಟ್‌ಕೇಸಿನ ಜೊತೆ ಹಳೆಯ ಟ್ರಂಕೊಂದು ಜಾಗಮಾಡಿಕೊಂಡು ಕ್ಯೂ ಸೇರಿತು. ಟ್ರಂಕು, ಹಾಸಿಗೆ ಸುರುಳಿ, ಡಬ್ಬಗಳು, ಬಕೆಟ್ಟುಗಳ ಆ ವಿಲಕ್ಷಣ ಕ್ಯೂ ನಿಧಾನವಾಗಿ ಚಲಿಸುತ್ತಿತ್ತು. ಯಾರೊಂದಿಗಾದರೂ ಮಾತನಾಡುವ ಎಂದು ಇಂಗ್ಲೀಷ್ ಬಲ್ಲ ವ್ಯಕ್ತಿಗಾಗಿ ನಿಂತಲ್ಲೇ ಹುಡುಕಿದೆ. ನನ್ನ ಹಿಂದೆ ಗಡಿಭದ್ರತಾ ಪಡೆಯ ಯೋಧನೊಬ್ಬ ನಿಂತಿದ್ದ. ಎಣ್ಣೆ ಹಾಕಿ ಹಿಂದಕ್ಕೆ ಬಾಚಿದ್ದ ಆತನ ಮಿರುಗುಟ್ಟುವ ಕಪ್ಪು ಕೂದಲು ಹಾಗೂ ಮುಖ ಚಹರೆ ಆತ ಮಲಯಾಳಿ ಎಂದು ಸಾರಿ ಹೇಳುತ್ತಿತ್ತು. ಆತನೊಂದಿಗೆ ಸ್ನೇಹ ಬೆಳೆಸಿದೆ. ಸಾಕಷ್ಟು ಚೆನ್ನಾಗಿ ಇಂಗ್ಲೀಷ್ ಮಾತನಾಡುತ್ತಿದ್ದ ಆತ ನನಗೆ ತ್ರಿಪುರಾದ ಮೊದಲ ಪರಿಚಯ ಮಾಡಿಸಿದ.

ಕಲ್ಕತ್ತೆಯ ವಿಮಾನ ನಿಲ್ದಾಣದಲ್ಲಿ ಕಂಡ ವೈಚಿತ್ರ್ಯಕ್ಕೂ ಆತ ಉತ್ತರ ಹೇಳಿದ. ಕಲ್ಕತ್ತೆಯಿಂದ ಭೂಮಾರ್ಗವಾಗಿ ಹೊರಟರೆ, ಹಾಗೂ ಎಲ್ಲ ಕಡೆಯೂ ರೈಲು, ಬಸ್ಸುಗಳು ಸರಾಗವಾಗಿ ಸಿಕ್ಕರೆ, ಅಗರ್ತಲಾ ತಲುಪಲಿಕ್ಕೆ ಮೂರುದಿನ ಬೇಕಂತೆ. ಅಸ್ಸಾಮಿನಲ್ಲಿ ನಡೆಯುತ್ತಿರುವ ಗಲಭೆಯಿಂದಾಗಿ ಸರಾಗವಾಗಿ ರೈಲು ಬಸ್ಸುಗಳು ಸಿಕ್ಕುವುದು ತೀರಾಅನುಮಾನ ವಿಮಾನದಲ್ಲಿ ಕಲ್ಕತ್ತೆಯಿಂದ ಅಗರ್ತಲಾ ಮೂವತ್ತು ನಿಮಿಷಗಳ ದಾರಿ. ಮಧ್ಯೆ ನಿಂತಿರುವ ಬಂಗ್ಲಾದೇಶವನ್ನ ಹಾರಿದರೆ ಅಗರ್ತಲಾಕ್ಕೂ ಕಲ್ಕತ್ತೆಗೂ ಕೇವಲ ಇನ್ನೂರು ಚಿಲ್ಲರೆ ಮೈಲಿಗಳ ಅಂತರ.

ತ್ರಿಪುರಾ ಭಾರತಕ್ಕೆ ಅಂಟಿಕೊಂಡಿರುವುದು ಒಂದು ಕಡೆ ಮಾತ್ರ. ಮಿಕ್ಕ ಮೂರು ಕಡೆ ಬಂಗ್ಲಾದೇಶದ ಗಡಿ ಬರುತ್ತದೆ. ತ್ರಿಪುರಾದ ಉತ್ತರಕ್ಕೆ ಅಸ್ಸಾಂ ಹಾಗೂ ಪಶ್ಚಿಮದ ಒಂದು ತುದಿಯಲ್ಲಿ ಮಿಜೋರಾಮ್ ಇದೆ. ತ್ರಿಪುರಾಗಿರುವ ಏಕೈಕ ರಸ್ತೆ ಸಂಪರ್ಕ ಅಸ್ಸಾಮಿನ ಮೂಲಕ ಹಾದು ಬರಬೇಕು. ಅಸ್ಸಾಮಿನ ದಕ್ಷಿಣದಲ್ಲಿರುವ ಸಿಲ್‌ಚಾರ್ ಮೂಲಕ ಹಾದು ಬರುವ ಈ ರಸ್ತೆ ಬಂದಾದರೆ ತ್ರಿಪುರಾದ ಉಸಿರು ಕಟ್ಟುತ್ತದೆ.ರೈಲುದಾರಿ ಕೂಡಾ ಇದೇ ಮಾರ್ಗವಾಗಿ ತ್ರಿಪುರಾದ ಗಡಿಯುವರೆಗೆ ಬಂದು ಗಡಿಯಿಂದ ಹತ್ತು ಮೈಲಿ ಒಳಗಿರುವ ಧರ್ಮನಗರ್ ಎನ್ನುವಲ್ಲಿ ನಿಂತು ಬಿಡುತ್ತದೆ. ಎಡ ಸರ್ಕಾರ ಬಂದಾಗಿನಿಂದ ಮಲತಾಯಿ ಧೋರಣೆ ತೋರಿಸುತ್ತಾ ಬಂದಿರುವ ಕೇಂದ್ರ ಸರಕಾರಕ್ಕೆ ಈ ರೈಲು ದಾರಿಯನ್ನ ಮುಂದುವರೆಸುವ ಆಸಕ್ತಿ ಇಲ್ಲ. ಕೇಂದ್ರ ಈ ಮಲತಾಯಿ ಧೋರಣೆಯಿಂದಾಗಿ ಈಗ ತ್ರಿಪುರಾದಲ್ಲಿ ಡೀಸಲ್ ಮುಂತಾದ ಅಗತ್ಯ ವಸ್ತುಗಳಿಗೆ ಎಂಥಹ ತೊಂದರೆ ಇದೆಯೆಂದರೆ ರೇಷನ್ ಕಾರ್ಡಿನ ಮೇಲೆ ಡೀಸಲ್ ಹಂಚಲಾಗುತ್ತಿದೆ. 'ಸಂಪರ್ಕ ವ್ಯವಸ್ಥೆ ಬೆಳೆಯದೆ ತ್ರಿಪುರಾದ ಬೆಳವಣಿಗೆ ಅಸಾಧ್ಯ' ಎನ್ನುವ ತ್ರಿಪುರಾದ ಮುಖ್ಯಮಂತ್ರಿ ಕಾಂ. ನೃಪೆನ್ ಚಕ್ರವರ್ತಿಯವರ ಎಲ್ಲ ಅಹವಾಲುಗಳೂ ಇಲ್ಲಿಯವರೆಗೆ ಕೇಂದ್ರದ ಕಿವುಡು ಕಿವಿಗೆ ತಲುಪೇ ಇಲ್ಲ.

ಅಗರ್ತಲಾದ ಪುಟ್ಟ ವಿಮಾನ ನಿಲ್ದಾಣದಲ್ಲಿಳಿದು ಹದಿನೈದು ಮೈಲಿ ದೂರ ಇರುವ ಊರಿನ ಕಡೆ ಆಟೋ ರಿಕ್ಷಾ ಒಂದರಲ್ಲಿ ಹೊರಟೆ. ಎರಡೂ ಪಕ್ಕದಲ್ಲಿದ್ದ ಮರ, ಗಿಡ, ಬಳ್ಳಿಗಳು, ಗುಡಿಸಲುಗಳು ಥೇಟ್ ದಕ್ಷಿಣ ಕನ್ನಡ ಜಿಲ್ಲೆಯನ್ನ ನೆನಪಿಗೆ ತರುತ್ತಿದ್ದವು. ಕೇರಳ ಬಹಳಷ್ಟು ರೀತಿಯಲ್ಲಿ ಕೇರಳವನ್ನೋ ಅಥವಾ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯನ್ನೋ ಹೋಲುತ್ತದೆ. ಬತ್ತ, ತೆಂಗು, ಅಡಿಕೆ, ಹಲಸು, ಮಾವು, ಹಾಗೂ ಬಿದಿರು ಇಲ್ಲಿ ಹೇರಳವಾಗಿ ಬೆಳೆಯುತ್ತದೆ. ಅಲ್ಲಲ್ಲಿ ಕಾಡುಗಳು, ಪಕ್ಕದಲ್ಲಿ ಕಾಡುಕಡಿದ ಬೋಳುಗುಡ್ಡಗಳು, ಗುಡ್ಡಗಳ ಮೇಲೆ ಬಿದಿರಿನಿಂದ ಹೆಣೆದ ಪುಟ್ಟ ಮನೆಗಳು, ಗುಡ್ಡಗಳ ನಡುವೆ ತಗ್ಗಿನಲ್ಲಿ ಬತ್ತದ ಗದ್ದೆಗಳು, ಎಲ್ಲ ಥೇಟ್ ದಕ್ಷಿಣ ಕನ್ನಡದ ಹಾಗೆ.

ತ್ರಿಪುರಾದ ಜನ ಎಲ್ಲಕ್ಕೂ ಬಿದಿರನ್ನ ಬಳಸುತ್ತಾರೆ. ಬಿದಿರಿನಿಂದ ಹೆಣೆದ ಗೋಡೆ, ಮಾಡು ಹಾಗೂ ಬೇಲಿಗಳು ನೋಡಲಿಕ್ಕೆ ತುಂಬ ಸುಂದರ. ಬಿದಿರು ಹೆಣೆಯುವಾಗ ಆ ಜನ ತರತರಹೆಯ ಡಿಸೈನ್‌ಗಳನ್ನು ಬಳಸಿ ತುಂಬ ಕಲಾತ್ಮಕವಾಗಿ ಹೆಣೆಯುತ್ತಾರೆ. ನಮ್ಮಲ್ಲಿ ಕಾಣದ ಅಲ್ಲಿನ ಒಂದು ವಿಶೇಷವೆಂದರೆ. ಅವರ ಮನೆಗಳ ಹಿಂದೆ ಮೀನು ಸಾಕಲಿಕ್ಕೆಂದು ಮಾಡಿಕೊಂಡ ಸಣ್ಣ ಪುಟ್ಟ ಹೊಂಡಗಳು. ನಮ್ಮೂರುಗಳಲ್ಲಿ ಹಿತ್ತಲಲ್ಲಿ ತರಕಾರಿ ತೋಟಗಳಿದ್ದ ಹಾಗೆ ಇಲ್ಲಿ ಮೀನುತರಕಾರಿ ಹೊಂಡಗಳು.

ತ್ರಿಪುರಾದ ಅರ್ಧಕ್ಕೂ ಹೆಚ್ಚು ಭಾಗ ಕಾಡಿನಿಂದ ಆವೃತ್ತವಾಗಿದೆ. ಹಚ್ಚ ಹಸುರಿನ ಈ ನಾಡಿನಲ್ಲಿ ಕೆಂಪು ನೆಲ ಹೇಗೆ ಭದ್ರವಾಯಿತು ಎನ್ನುವುದು ಸೋಜಿಗದ ಸಂಗತಿ. ಕಮ್ಯುನಿಸಂ ಬೆಳೆಯಲಿಕ್ಕೆ ನಾವು ಸಾಮಾನ್ಯವಾಗಿ ಆರೋಪಿಸುವ ಯಾವ ಲಕ್ಷಣಗಳೂ ತ್ರಿಪುರಾದಲ್ಲಿಲ್ಲ, ಇಲ್ಲಿ ದೊಡ್ಡ ನಗರಗಳಿಲ್ಲ, (ಪುಟ್ಟ ನಗರಗಳೂ ಇಲ್ಲ.) ಕಾರ್ಖಾನೆಗಳಿಲ್ಲ. ಹಾಗಾಗಿ ಹೇಳಿಕೊಳ್ಳುವಂತಹ ಕಾರ್ಮಿಕವರ್ಗವಿಲ್ಲ. ಅಗರ್ತಲಾದ ಒಬ್ಬ ಕಾಮ್ರೇಡ್ ತ್ರಿಪುರಾದ ಬಗ್ಗೆ ಮಾತನಾಡುತ್ತ, ತಮಾಷೆಯಾಗಿ 'ಇಲ್ಲಿನ ಅತಿದೊಡ್ಡ ಕೈಗಾರಿಕೆಯೆಂದರೆ ಇಲ್ಲಿನ ಸರಕಾರಿ ಕಛೇರಿಗಳು' ಎಂದು ಜೋಕ್ ಮಾಡಿದ್ದ. 'ಹಾಗಿದ್ದರೆ ತ್ರಿಪುರಾದಲ್ಲಿ, ಆಂಧ್ರದಲ್ಲಿದ್ದಂತೆ ದೊಡ್ಡ Feudal ಜಮೀನ್ದಾರರುಗಳು ಇದ್ದಾರಾ!' ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ಆತ ಇಲ್ಲ ಎಂದು ತಲೆಯಾಡಿಸಿದ್ದ. ಸ್ವಾತಂತ್ರಕ್ಕೂ ಮುಂಚಿನ ಕಾಲದಲ್ಲಿ ಇಲ್ಲಿದ್ದ ಜನರೆಂದರೆ ತ್ರಿಪುರಾದ ಆದಿವಾಸಿಗಳು ಮಾತ್ರ. ಆ ಜನ ಕೂಡಾ ಜಮೀನು ಹೊಂದಿ ಒಂದು ಕಡೆ ನಿಂತು ಬೇಸಾಯ ಮಾಡುವುದಕ್ಕಿಂತ ಹೆಚ್ಚಾಗಿ ಕಾಡಿನಲ್ಲಿ ಅಲೆದಾಡಿಕೊಂಡು ಪ್ರತೀ ವರ್ಷ ಮಳೆಗಾಲಕ್ಕೆ ಮುಂಚೆ ಯಾವುದಾದರೂ ಗುಡ್ಡದ ಮೇಲ್ಮೈಸವರಿ ಹುಲ್ಲಿಗೆ ಬೆಂಕಿಕೊಟ್ಟು, ಮಳೆ ಬಂದ ಮೇಲೆ ಬತ್ತ ಚೆಲ್ಲಿ ಕೃಷಿ ಮಾಡುವ ವಿಧಾನ ಅವರದ್ದು. ತೀರ ಪ್ರಾಚೀನವಾದ ಈ ವಿಧಾನವನ್ನು ಘಟ್ಟದ ಕೆಳಗೆ ಈಗಲೂ ಕೆಲವು ಜನಾಂಗಗಳು ಅನುಸರಿಸುವುದನ್ನು ಕಾಣಬಹುದು.

ವಿಭಜನೆಯ ನಂತರ ಪೂರ್ವ ಬಂಗಾಲದಿಂದ ನಿರಾಶ್ರಿತರಾಗಿ ಬಂದ ಬಂಗಾಲಿಗಳು ತ್ರಿಪುರಾದಲ್ಲಿ ಜಮೀನು ಕೊಂಡು ನೆಲೆಸಿದರು. ಆನಂತರದ ವರ್ಷದಲ್ಲಿ ಆದಿವಾಸಿಗಳನ್ನ ಮೂಲೆ ಗುಂಪಾಗಿಸಿದ ಬಂಗಾಲಿಗಳು ತ್ರಿಪುರಾದಲ್ಲಿ ಪ್ರಬಲರಾಗಿಬಿಟ್ಟರು. ಹೀಗೆ ಬಂದ ಬಂಗಾಲಿಗಳು ಆದಿವಾಸಿಗಳಿಂದ ಕಿತ್ತುಕೊಂಡ ಜಮೀನನ್ನು ಆದಿವಾಸಿಗಳಿಗೆ ಹಿಂತಿರುಗಿಸುವುದೂ ಎಡ ಸರ್ಕಾರದ ಒಂದು ಮುಖ್ಯ ಕಾರ್ಯಕ್ರಮ. ಈಗ ಭೂಮಾಲೀಕರುಗಳಾಗಿರುವ ಬಂಗಾಲಿಗಳೂ ಕೂಡಾ ಬಿಹಾರ ಅಥವಾ ಆಂಧ್ರ ಮಾದರಿಯ Feudal ಜಮೀನ್ದಾರರುಗಳೇನೂ ಅಲ್ಲ. ಇಷ್ಟಾಗಿಯೂ ಇಂದು ತ್ರಿಪುರಾ ಕಮ್ಯುನಿಸ್ಟರ ಭದ್ರ ನೆಲೆ.

ತ್ರಿಪುರಾದಲ್ಲಿ ಮಾರ್ಕ್ಸ್‌ವಾದಿಗಳ ಪ್ರಾಬಲ್ಯ ಕಣ್ಣಿಗೆ ಕಾಣುವಂತೆ ಬೆಳೆದದ್ದು ಇತ್ತೀಚಿನ ಎಂಟು ಹತ್ತು ವರ್ಷದಲ್ಲಿ. ಆದರೆ ತ್ರಿಪುರಾದ ಪಾರ್ಟಿಗೆ ಭವ್ಯ ಪರಂಪರೆಯಿದೆ. ತ್ರಿಪುರಾದ ಪಾರ್ಟಿಯ ಹಿರಿಯ ನಾಯಕರಲ್ಲಿ ಅನೇಕರು ಆದಿವಾಸಿಗಳ ದಿಟ್ಟ ಹೋರಾಟದ ಮುಂಚೂಣಿಯಲ್ಲಿದ್ದು ಬೆಳೆದ ಆದಿವಾಸಿ ನಾಯಕರುಗಳು. ತ್ರಿಪುರಾದಲ್ಲಿ ಅಧಿಕೃತವಾಗಿ ಕಮ್ಯುನಿಸ್ಟ್ ಪಕ್ಷ ಪ್ರಾರಂಭವಾಗುವುದಕ್ಕೂ ಮುಂಚೆ ತ್ರಿಪುರಾದ ಆದಿವಾಸಿಗಳು ಅಲ್ಲಿನ ಮಹಾರಾಜನ ವಿರುದ್ಧ ಹಾಗೂ ಜಮೀನ್ದಾರರುಗಳ ವಿರುದ್ಧ ಭವ್ಯವಾದ ಹೋರಾಟಗಳನ್ನು ನಡೆಸಿದ್ದರು ಅದರಲ್ಲಿ ರತನ್‌ಮುನಿ ಎಂಬಾತನ ನಾಯಕತ್ವದಲ್ಲಿ ನಡೆದ ರಿಯಾಂಗ್ ದಂಗೆ ಬಹಳ ಮುಖ್ಯವಾದದ್ದು. ಆಗ ರೈತರ ಹಾಗೂ ಆದಿವಾಸಿಗಳ ಹೋರಾಟದ ನಾಯಕತ್ವ ವಹಿಸಿದ್ದು 'ಪ್ರಜಾಮಂಗಳ ಸಮಿತಿ' ಅಥವಾ 'ಗನಾ ಮುಕ್ತಿ ಪರಿಷತ್' ಎನ್ನುವ ಸಂಘಟನೆಗಳು.

ಆಕಾಲದಲ್ಲಿ ಇನ್ನೂ ವಿದ್ಯಾರ್ಥಿಯಾಗಿದ್ದ ಕಾಂ. ದಶರಥದೇವ್ ಕಲ್ಕತ್ತೆಯಲ್ಲಿ ಓದುತ್ತಿದ್ದಾಗ ಮಾರ್ಕ್ಸ್‌ವಾದಿ ಸಿದ್ಧಾಂತದಿಂದ ಆಕರ್ಷಿತರಾಗಿ ಅನೇಕ ಮಾರ್ಕ್ಸ್‌ವಾದಿ ಲೆನಿನ್‌ವಾದಿ ಪುಸ್ತಕಗಳನ್ನು ಓದಿ ತ್ರಿಪುರಾಗೆ ಹಿಂದಿರುಗಿದರು. ಕಾಂ. ದಶರಥದೇವ್ ಆದಿವಾಸಿ ಜನಾಂಗದಿಂದ ಬಂದ ಕಲಿತ ಯುವಕ. ಆಗ ಅಗರ್ತಲಾದಲ್ಲಿ ಹೈಸ್ಕೂಲ್ ಮೇಷ್ಟರಾಗಿದ್ದ ಸುಧೋಮಿಯದೇವ್ ಭರ್ಮನ್ ಮಹೋನ್ನತ ಕ್ರಾಂತಿಕಾರಿ. ಆದಿವಾಸಿಗಳ ಭೂಮಿ ಹೋರಾಟ ಆ ಹೊತ್ತಿಗೆ(1942 ಆಸುಪಾಸು)ಸಶಸ್ತ್ರ ಹೋರಾಟವಾಗಿ ಪರಿಣಮಿಸಿತ್ತು. ಹೋರಾಟದ ನಾಯಕತ್ವ ದಶರಥದೇವ್ ಅವರ ಪಾಲಿಗೆ ಬಂತು. ನಾಡ ಬಂದೂಕ ಹಿಡಿದು ತೆಲಂಗಾಣ ಮಾದರಿಯಲ್ಲಿ ನಡೆದ ಈ ಹೋರಾಟದ ನಾಯಕತ್ವವಹಿಸಿದ್ದ ಕಾಂ. ದಶರಥದೇವ್ ಕಾಂ.ಸುಧೋಮಿಯದೇವ್ ಭರ್ಮನ್ ಎಲ್ಲರೂ ಆಗ ಭೂಗತರು. 1950ರಲ್ಲಿ ತ್ರಿಪುರಾದಲ್ಲಿ ಲೋಕಸಭಾ ಚುನಾವಣೆಗಳು ನಡೆದಾಗ ಕಾಂ. ದಶರಥದೇವ್ ಭೂಗತರಾಗಿಯೇ ಚುನಾವಣೆಗೆ ನಿಂತರು. ಆಗ ಇದ್ದ ಒಂದು ಕಾಯಿದೆಯ ಪ್ರಕಾರ ನಾಮಪತ್ರ ಸಲ್ಲಿಸಲಿಕ್ಕೆ ಅಭ್ಯರ್ಥಿಯೇ ಬರಬೇಕೆನ್ನುವ ನಿಯಮವಿರಲಿಲ್ಲ. ಅಭ್ಯರ್ಥಿಯ ಹಸ್ತಾಕ್ಷರವೂ ಇಲ್ಲದೆ, ಬೇರೆ ಯಾರಾದರೂ ಒಬ್ಬರು ಅಭ್ಯರ್ಥಿಯ ಪರವಾಗಿ ನಾಮಪತ್ರ ಸಲ್ಲಿಸಬಹುದಾಗಿತ್ತು. ಕಾಂ. ದಶರಥದೇವ್, ಕಾಂ. ಬಿರೇನ್ ದತ್ತ ಹಾಗೂ ಇತರರ ಮೇಲೆ ನೂರಾರು ಪೋಲೀಸ್ ಕೇಸುಗಳಿದ್ದವು, ಒಂದೆರಡು ಸುಳ್ಳು ಕೊಲೆಯ ಕೇಸುಗಳೂ ಇದ್ದವು. ಅವರನ್ನು ಹಿಡಿದು ಕೊಟ್ಟವರಿಗೆ ಸರ್ಕಾರ ಬಹುಮಾನವನ್ನು ಕೂಡಾ ಸಾರಿತ್ತು. ಅಂಥ ಪರಿಸ್ಥಿತಿಯಲ್ಲಿ ನಡೆದ ಚುನಾವಣೆಯಲ್ಲಿ ಕಾಂ. ದಶರಥದೇವ್ ಹಾಗೂ ಕಾಂ. ಬಿರೇನ್‌ದತ್ತ ಪ್ರಚಂಡ ಬಹುಮತದಿಂದ ಆರಿಸಿಬಂದರು. ಇದೇ ಸುಮಾರಿಗೆ, ಬಂಗಾಲದಲ್ಲಿ ಪಾರ್ಟಿ ಸೆಕ್ರೆಟರಿಯಾಗಿದ್ದ ನ್ರಿಪೆನ್ ಚಕ್ರವರ್ತಿಯವರು, ಅಲ್ಲಿಂದ ತ್ರಿಪುರಾಗೆ ಬಂದದ್ದು, ಇಂಗ್ಲೀಷಿನಲ್ಲಿ ಡಬ್ಬಲ್ ಎಂ. ಎ. ಮಾಡಿ, Statesman ಪತ್ರಿಕೆಯಲ್ಲಿ ಸಂಪಾದಕೀಯದಲ್ಲಿ ಕೆಲಸಮಾಡಿ, ಹಾಗೂ ಸಂಯುಕ್ತ ಬಂಗಾಲದ ಪಾರ್ಟಿ ಸೆಕ್ರೆಟರಿಯಾಗಿದ್ದ ನ್ರಿಪೆನ್ ಚಕ್ರವರ್ತಿಯವರ ಆಗಮನ ತ್ರಿಪುರಾದ ಪಾರ್ಟಿಯ ಬೆಳವಣಿಗೆಗೆ ಬಹಳ ಸಹಕಾರಿಯಾಯಿತು.

1950ರ ದಶಕದಲ್ಲಿ ಹಾಗೂ ಅದಕ್ಕೆ ಮೊದಲು ತ್ರಿಪುರಾದಲ್ಲಿ ಕಮ್ಯುನಿಸ್ಟರ ನೆಲೆ ಆದಿವಾಸಿಗಳ ನಡುವೆ. ತೆಲಂಗಾಣದ ಮಾದರಿಯಲ್ಲೇ ತ್ರಿಪುರಾದ ಕೆಲವು ಪ್ರದೇಶಗಳನ್ನು ಜಮೀನ್ದಾರರ ಹಿಡಿತದಿಂದ ವಿಮೋಚಿತಗೊಳಿಸಿ ಜನತೆಯ ಆಡಳಿತ ನಡೆಸುತ್ತಿದ್ದ ಕಮ್ಯುನಿಸ್ಟರೆಂದರೆ ತ್ರಿಪುರಾದ ಕಿರೀಟ ವಿಕ್ರಮ ಕಿಶೋರ್ ಮಾಣಿಕ್ ಬಹದ್ದೂರ್ ಮಹಾರಾಜನಿಗೆ, ಆತನ ತಂದೆ ವೀರವಿಕ್ರಮ ಬಹದ್ದೂರ್ ಮಹಾರಾಜನಿಗೆ ಹಾಗೂ ಕಾಂಗ್ರೆಸ್ ಸರಕಾರಕ್ಕೆ ಸಿಂಹಸ್ವಪ್ನವಿದ್ದಂತೆ.

[ಮುಂದುವರೆಯುವುದು]

— ಪ್ರಶಾಂತ್

ಶ್ರೀಲಂಕಾದಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟು

ಶ್ರೀಲಂಕಾ, ಭಾರತದೊಡನೆ ಭಾವನಾತ್ಮಕ ಸಂಬಂಧವಿರುವ ನೆರೆಹೊರೆಯ ರಾಷ್ಟ್ರಗಳಲ್ಲೊಂದು. ಈ ಎರಡೂ ದೇಶಗಳೂ ಬ್ರಿಟಿಷ್ ವಸಾಹತುಗಳಾಗಿದ್ದವು. ಹಲವು ಆರ್ಥಿಕ, ಸಾಮಾಜಿಕ ಸಾಮ್ಯಗಳನ್ನು ಹೊಂದಿವೆ. ಭಾರತ ಸ್ವತಂತ್ರವಾದ ಸುಮಾರಿಗೆನೇ ಸ್ವತಂತ್ರವಾದ ಈ ಪುಟ್ಟ ದೇಶದ ರಾಜಕೀಯ ಬೆಳವಣಿಗೆಗಳು ಭಾರತದಲ್ಲಿನ ಬೆಳವಣಿಗೆಗಳಿಗೆ ಸಮಾಂತರವಾಗಿವೆ. ಇತ್ತೀಚಿನ ಸಾಮ್ಯ : 1977ರಲ್ಲಿ ಇಂದಿರಾ ಸರ್ವಾಧಿಕಾರವನ್ನು ಭಾರತೀಯರು ತಿರಸ್ಕರಿಸಿದ ಕೆಲವು ತಿಂಗಳಲ್ಲೇ, ಈ ಪುಟ್ಟ ದ್ವೀಪದ ಜನ ಅಲ್ಲಿ 6 ವರ್ಷಗಳ ತುರ್ತು ಪರಿಸ್ಥಿತಿ ಘೋಷಿಸಿ ಆಳ್ವಿಕೆ ಮಾಡಿದ ಸಿರಿಮಾವೋ ಭಂಢಾರನಾಯಕೆಯ ಪಕ್ಷದ ಸರಕಾರವನ್ನು ಕಿತ್ತೊಗೆದರು, ಚುನಾವಣೆಯ ಅದೇ ಅಸ್ತ್ರದಿಂದ.

ಅನಂತರ ಶ್ರೀಲಂಕಾದಲ್ಲಿ ಬಹಳ ಮಹತ್ವಪೂರ್ಣ ಬೆಳವಣಿಗೆಗಳಾಗಿವೆ. ಇತ್ತೀಚಿನ ವರದಿಗಳಿಂದ, ಶ್ರೀಲಂಕಾ ಹಿಂದೆಂದೂ ಕಾಣದ ಅತ್ಯಂತ ತೀವ್ರವಾದ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದೆ ಎಂದು ತಿಳಿದು ಬಂದಿದೆ. ಇದರ ಮುಖ್ಯ ಅಂಶವೆಂದರೆ ಜೀವನಾವಶ್ಯಕ ಸಾಮಗ್ರಿಗಳ ತೀವ್ರವಾದ ಬೆಲೆ ಏರಿಕೆ, ಅಕ್ಕಿ, ಹಿಟ್ಟು ಹಾಗೂ ಬ್ರೆಡ್ಡು ಇವುಗಳ ಬೆಲೆ ಹಿಂದೆಂದೂ ಇರದ ಪ್ರಮಾಣಕ್ಕೆ ಏರಿದೆ. ಇದಲ್ಲದೆ ಶ್ರೀಲಂಕಾ ಕೇಂದ್ರೀಯ ಬ್ಯಾಂಕಿನ ನಿರೀಕ್ಷೆಯಂತೆ ಈ ವರ್ಷ ಹಣದುಬ್ಬರ ಶೇಕಡಾ 30 ರಷ್ಟಿರಬಹುದೆಂದು ತಿಳಿದು ಬಂದಿದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳಾದ ಬಸ್ಸು, ರೈಲುಗಳ ಟಿಕೆಟ್ ದರವನ್ನು ಸಹ ವಿಪರೀತವಾಗಿ ಏರಿಸಲಾಗಿದೆ. ಆ ದೇಶದ ಮುಖ್ಯ ಬೆಳೆ ಹಾಗೂ ರಫ್ತು ಸಾಮಗ್ರಿಯಾದ ಟೀ ರಫ್ತಿನ ಪ್ರಮಾಣ ಶೇಕಡಾ 18 ರಷ್ಟು ಕಡಿಮೆಯಾಗಿದೆ. ಇತ್ತೀಚಿನ ಬರದ ಪರಿಣಾಮವಾಗಿ ಅಕ್ಕಿಯ ಉತ್ಪಾದನೆಯೂ ಕಡಿಮೆ ಇದೆ. ವಿದೇಶಗಳ ಜತೆ ಅದರ ವಾಣಿಜ್ಯ ವೈಷಮ್ಯ 500 ಕೋಟಿಗೇರಿದೆ. 1979-80ರ ಬಜೆಟ್‌ನಲ್ಲಿ ನಮೂದಿಸಿದ ಪ್ರಕಾರ, 600ಕೋಟಿ ರೂ ಆದಾಯ ಹಾಗೂ 1050 ಕೋಟಿ ರೂ. ಖರ್ಚು ಕಾಣಿಸಲಾಗಿದೆ. ಜನಸಂಖ್ಯೆ ತೀವ್ರಗತಿಯಲ್ಲಿ ಏರುತ್ತಿದ್ದು (30 ವರ್ಷಗಳಲ್ಲಿ 2 ಪಟ್ಟು) ನಿರುದ್ಯೋಗ ಶೇಕಡಾ 24 ರಷ್ಟಿದೆ. ವಿದೇಶೀ ಸಾಲದ ಪ್ರಮಾಣ ಸುಮಾರು 300 ಕೋಟಿಗಳಷ್ಟಿದೆ. ಹಲವು ಜೀವನಾವಶ್ಯಕ ಸಾಮಗ್ರಿಗಳನ್ನು ದೇಶ ಆಮದು ಮಾಡುತ್ತಿದ್ದು, ಇದರ ಅಧಿಕ ಬೆಲೆಯನ್ನು ಶ್ರೀಮಂತ ಮತ್ತು ಉಚ್ಚ ಮಧ್ಯಮ ವರ್ಗದ ಜನ ಮಾತ್ರ ತೆರಬಲ್ಲರು.

ಹೊರಮುಖ ಬೆಳವಣಿಗೆ ವಿಧಾನ :

ಇಂತಹ ತೀವ್ರ ಆರ್ಥಿಕ ಬಿಕ್ಕಟ್ಟಿಗೆ, ಜನಸಾಮಾನ್ಯರ ಹೇಳತೀರದ ಬವಣೆಗೆ ಕಾರಣವಾದ ರಾಜಕೀಯ, ಆರ್ಥಿಕ ಧೋರಣೆಗಳನ್ನು ಪರಿಶೀಲಿಸುವುದು ಮುಖ್ಯ. ಸಿರಿಮಾವೊ ಭಂಢಾರನಾಯಕೆಯವರ 6 ವರ್ಷದ ಸರ್ವಾಧಿಕಾರದ ವಿರುದ್ಧ ಎದ್ದ ಗಾಳಿಯಲ್ಲಿ ಅಧಿಕಾರದ ಗದ್ದುಗೆಗೇರಿದ ಜಯವರ್ಧನೆಯವರ ನಾಯಕತ್ವದ ಯುನೈಟೆಡ್ ನೇಶನಲ್ ಪಕ್ಷ ದೇಶದ ಆರ್ಥಿಕ, ರಾಜಕೀಯ ಧೋರಣೆಗಳಲ್ಲಿ ಅನೇಕ ಗಮನಾರ್ಹ ಬದಲಾವಣೆಗಳನ್ನು ಮಾಡಿತು. 1978 ಬಜೆಟ್ ಅಧಿವೇಶನದ ಸಮಯದಲ್ಲಿ ಮೊದಲ ಬಾರಿ ಈ ನೀತಿಗಳು ಬೆಳಕಿಗೆ ಬಂದವು. ಇಂಟರ್‌ನ್ಯಾಶನಲ್ ಮೊನೆಟರಿ ಫಂಡ್, ವಿಶ್ವ ಬ್ಯಾಂಕ್ ಮೊದಲಾದ ಸಾಮ್ರಾಜ್ಯಶಾಹಿ ಕಪಿಮುಷ್ಟಿಯಲ್ಲಿರುವ ಅಂತರ್‍ರಾಷ್ಟ್ರೀಯ ನೆರವು ನೀಡುವ ಸಂಸ್ಥೆಗಳ 'ಪರಿಣತರ' ಸಲಹೆಯ ಮೇರೆಗೆ ಜಯವರ್ಧನೆಯವರ ಸರಕಾರ 'ಹೊರಮುಖವಾದ ಬೆಳವಣಿಗೆ ವಿಧಾನ' ಅಥವಾ 'ರಫ್ತು ಪ್ರಧಾನವಾದ ಆರ್ಥಿಕತೆ'ಯನ್ನು ಅನುಸರಿಸಲು ನಿರ್ಧರಿಸಿತು. ಈ ನೀತಿ ಮತ್ತು ಇತರ ಹಲವು ನೀತಿಗಳನ್ನು ಅನುಸರಿಸಿದರೆ 160 ಕೋಟಿ ರೂ. ಸಾಲ ನೀಡುವುದಾಗಿ ಈ ಸಂಸ್ಥೆಗಳು ಭರವಸೆ ನೀಡಿದವು. ಇವನ್ನು ಸುಪ್ರೀತಗೊಳಿಸಲು ಜಯವರ್ಧನೆಯವರ ಸರಕಾರ ಅನುಸರಿಸಿದ ನೀತಿಗಳಲ್ಲಿ ಶ್ರೀಲಂಕಾ ರೂಪಾಯಿಯ ಇನ್ನಷ್ಟು ಅಪಮೌಲ್ಯ, ಆಮದು ಮತ್ತು ವಿನಿಮಯದ ಮೇಲಿದ್ದ ನಿರ್ಬಂಧಗಳ ಸಡಿಲಿಸುವಿಕೆ ಹಾಗೂ ಮುಕ್ತ ವ್ಯಾಪಾರ ಕ್ಷೇತ್ರ (Free Trade Zone) ಗಳ ನಿರ್ಮಾಣ; ಇವು ಮುಖ್ಯವಾದವು. ಇವು ಮಾತ್ರವಲ್ಲದೆ ಆರ್ಥಿಕತೆಯನ್ನು 'ಅನಗತ್ಯ ನಿರ್ಬಂಧ'ಗಳಿಂದ 'ಮುಕ್ತಗೊಳಿಸುವ' ಘೋಷಣೆಯಡಿಯಲ್ಲಿ ದೇಶದ ಆರ್ಥಿಕತೆಯಲ್ಲಿ ಸಂರಚನಾತ್ಮಕ ಬದಲಾವಣೆಗಳನ್ನು ತರುವ ಪ್ರಯತ್ನ ನಡೆಸಿತು. ಚಹ, ರಬ್ಬರ್, ತೆಂಗು ಮುಂತಾದ ಹಣದ ಬೆಳೆಗಳು, ಪ್ಲಾಂಟೇಷನ್‌ಗಳು ಹಾಗೂ ಉತ್ಪಾದಿತ ವಸ್ತುಗಳ ಕಾರ್ಖಾನೆಗಳು ಹೆಚ್ಚಿನವು ರಾಷ್ಟ್ರೀಕೃತ ಸಾರ್ವಜನಿಕ ಕ್ಷೇತ್ರ (Public Sector)ದಲ್ಲಿವೆ, ಇವನ್ನು ಖಾಸಗಿ ಬಂಡವಾಳಿಗರಿಗೆ ಒಪ್ಪಿಸುವ ಹಾಗೂ ಹಲವು ದೊಡ್ಡ ಸಾರ್ವಜನಿಕ ಕ್ಷೇತ್ರಗಳ ಉಸ್ತುವಾರಿ ಖಾಸಗಿ ಬಂಡವಳಿಗರ ಸಂಸ್ಥೆಗಳಿಗೆ ಒಪ್ಪಿಸುವ ಸನ್ನಾಹ ನಡೆಸಲಾಯಿತು.

ಮುಕ್ತ ವ್ಯಾಪಾರ ಕ್ಷೇತ್ರ :

ಮುಕ್ತವ್ಯಾಪಾರ ಕ್ಷೇತ್ರಗಳ ನಿರ್ಮಾಣ ಈ ಹೊಸ 'ಬೆಳವಣಿಗೆ ವಿಧಾವ'ದ ಮುಖ್ಯ ಅಂಶ. ಇದು ಮುಖ್ಯವಾಗಿ ವಿದೇಶಿ ಬಂಡವಾಳವನ್ನು ಆಕರ್ಷಿಸಲು ಕೈಗೊಳ್ಳುವ ಹಲವು ಕ್ರಮಗಳಿಗೆ ಕೊಟ್ಟ ಹೆಸರು. ಕೊಲಂಬೊದಲ್ಲಿ ವಿಮಾನನಿಲ್ದಾಣ ಮತ್ತು ರೈಲು ನಿಲ್ದಾಣಗಳಿಂದ ಉತ್ತಮ ಸಂಚಾರ ವ್ಯವಸ್ಥೆ ಇರುವ ಹಾಗೂ ಹತ್ತಿರವಿರುವ ಸುಮಾರು 300 ಎಕ್ರೆ ಪ್ರದೇಶವನ್ನು 20 ಕೋಟಿ ರೂ. ವೆಚ್ಚದಲ್ಲಿ ಮುಕ್ತವ್ಯಾಪಾರಿ ಕ್ಷೇತ್ರವಾಗಿ ಬೆಳೆಸಲಾಗುತ್ತಿದೆ. ಇಲ್ಲಿ ಸ್ಥಾಪಿಸಲಾಗುವ ಕಾರ್ಖಾನೆಗಳಿಗೆ 5 ವರ್ಷ ತೆರಿಗೆ ರಿಯಾಯಿತಿ ಕೊಡಲಾಗುತ್ತದೆ. ಕಾರ್ಖಾನೆ ಮಾಲಕತ್ವವನ್ನು ವಿದೇಶಿ ಬಂಡವಾಳಿಗರು ತಮ್ಮ ಪೂರ್ಣ ಸ್ವಾಧೀನಲ್ಲಿಟ್ಟುಕೊಳ್ಳಬಹುದು (ಶ್ರೀಲಂಕಾದ ಯಾರನ್ನೇ ಆಗಲಿ ಭಾಗಿಗಳಾಗಿ ತೆಗೆದುಕೊಳ್ಳಬೇಕಾಗಿಲ್ಲ). ಮುಂದೆಯೂ ಶ್ರೀಲಂಕಾಕ್ಕೆ ಇವನ್ನು ಒಪ್ಪಿಸಬೇಕಾಗಿಲ್ಲ. ಇವರು ವಿದೇಶಿ ಬ್ಯಾಂಕ್‌ಗಳಲ್ಲಿ ಗುಪ್ತ ಸಂಖ್ಯೆಗಳಲ್ಲಿ ಅಕೌಂಟ್ ಇಟ್ಟುಕೊಳ್ಳಬಹುದು. ಎಲ್ಲಾ ಥರದ ಕಚ್ಚಾವಸ್ತುಗಳ ಆಮದು ಮಾಡಿಕೊಳ್ಳಬಹುದು ಹಾಗೂ ಇವಕ್ಕೆ ಯಾವುದೇ ಕರ ವಿಧಿಸಲಾಗುವುದಿಲ್ಲ. ಇಲ್ಲಿ ಸಿದ್ಧವಾದ ವಸ್ತುಗಳಲ್ಲಿ ಶೇಕಡಾ 50ನ್ನು ಸ್ಥಳೀಯವಾಗಿ ಮಾರಬಹುದು ಸಹ. ಒಟ್ಟಾರೆ ಈ ಮುಕ್ತ ವ್ಯಾಪಾರಿ ಕ್ಷೇತ್ರ, ಶ್ರೀಲಂಕಾದಲ್ಲೇ ಇದ್ದು ಅದರ ಯಾವುದೇ ಕಾನೂನು, ನಿರ್ಬಂಧವಿಲ್ಲದ ಪೂರ್ಣವಾಗಿ ವಿದೇಶಿ ಬಂಡವಾಳಿಗರ ಕೈಯಲ್ಲಿರುವ ಕ್ಷೇತ್ರ.

ಇವಷ್ಟಲ್ಲದೆ ಶ್ರೀಲಂಕಾದ ಸುತ್ತಮುತ್ತಲಿರುವ ಕಡಲಲ್ಲಿ ಮೀನುಗಾರಿಕೆ ನಡೆಸಲು 40 ವಿದೇಶಿ ಮೀನುಗಾರಿಕಾ ಟ್ರಾಲರ್‌ಗಳಿಗೆ ಅನುಮತಿ ಕೊಡಲಾಗಿದೆ. ಅಂತರ್‍ರಾಷ್ಟ್ರೀಯ ಬೆಲೆಗಳಿಗೆ ಹೋಲಿಸಿದರೆ ಕ್ಷುಲ್ಲಕ ಎನಿಸಬಹುದಾದಷ್ಟು ಕಡಿಮೆ ಗೌರವಧನ ಕೊಡಬೇಕು ಎಂಬುದನ್ನು ಬಿಟ್ಟರೆ ಇವುಗಳ ಮೇಲೆ ಯಾವುದೇ ನಿರ್ಬಂಧಗಳಿಲ್ಲ. ಈ ಕ್ರಮದಿಂದ ಮೀನು. ಸಿಗಡಿ ಮುಂತಾದವುಗಳ ಬೆಲೆ ವಿಪರೀತವಾಗಿ ಏರಿರುವುದು ಮಾತ್ರವಲ್ಲದೆ ಅವು ದೊರೆಯುವುದೇ ಕಷ್ಟವಾಗಿದೆ. ಹೆಚ್ಚಿನವು ರಫ್ತಾಗುತ್ತಿವೆ. ವಿದೇಶಿ ಕಂಪನಿಗಳಿಗೆ ಲಾಭಗಳಿಸಿಕೊಡುತ್ತಿವೆ.

ತೀವ್ರ ಬೆಲೆಏರಿಕೆಗೆ ಕಾರಣ :

ಇಷ್ಟಕ್ಕೆ ವಿಶ್ವಬ್ಯಾಂಕ್‌ನ ಶರತ್ತುಗಳು ಮುಗಿಯಲಿಲ್ಲ. ಸಾಲ ದೊರಕಿಸಿಕೊಡಲು ಇನ್ನೆರಡು ಶರತ್ತುಗಳನ್ನು ಅದು ಹಾಕಿತು. ಮೊದಲನೆಯದು ಶ್ರೀಲಂಕಾದಲ್ಲಿ ಮೊದಲಿನಿಂದಲೂ ಜಾರಿಯಲ್ಲಿ ಇದ್ದ ಶೇಕಡಾ 50 ರಷ್ಟು ಜನರಿಗೆ ಸರ್ಕಾರ ಕೊಡುತ್ತಿದ್ದ ಕಡಿಮೆ ದರದ ರೇಶನ್ ಖೋತಾ ಮಾಡಬೇಕೆಂಬುದು. ಎರಡನೆಯದು ಹಿಟ್ಟು, ಹಾಲಿನ ಬೋರ್ಡ್, ಸಿಲೋನ್ ಸಾರಿಗೆ ಬೋರ್ಡ್, ಗೊಬ್ಬರ ಕಾರ್ಪೊರೇಷನ್, ಪೆಟ್ರೋಲಿಯಂ ಕಾರ್ಪೊರೇಷನ್ ಮುಂತಾದವುಗಳಿಗೆ ಸರಕಾರ ಕೊಡುತ್ತಿದ್ದ ಸಬ್ಸಿಡಿ ಖೋತಾ ಮಾಡಬೇಕೆಂಬುದು. ಒಟ್ಟಾರೆ ಎಲ್ಲಾ ಜನಕಲ್ಯಾಣ ಕಾರ್ಯಾಚರಣೆಗಳನ್ನು ಸಿಲ್ಲಿಸಬೇಕು. ಇವೆಲ್ಲಾ ಪೋಲು. ವ್ಯರ್ಥ ಎಂದು ಈ ಪರಿಣತರ ಅಭಿಪ್ರಾಯ. ಜಯವರ್ಧನೆಯ ಸರಕಾರ ಇದನ್ನೂ ವಿಧೇಯತೆಯಿಂದ ಪಾಲಿಸಿದೆ. ವಿಶೇಷವಾಗಿ ಈ ನೀತಿಯೇ ಇತ್ತೀಚಿನ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ, ಅಭಾವಕ್ಕೆ ಕಾರಣ.

ಇಷ್ಟೇ ಅಲ್ಲದೆ ಈ ರೀತಿಯ 'ಬೆಳವಣಿಗೆಯ ವಿಧಾನ'ದಿಂದ (ರಫ್ತು ಪ್ರಧಾನವಾಗಿರುವ) ಶ್ರೀಲಂಕಾದ ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯ ಸಮಸ್ಯೆ ಉದ್ಭವಿಸಿದೆ.

ಒಟ್ಟಾರೆ ಹೇಳುವುದಾದರೆ ಜಯವರ್ಧನೆ ಸರ್ಕಾರ ಪೂರ್ಣ ಪ್ರಮಾಣದ ಬಂಡವಾಳಶಾಹಿ-ಪರ, ಸಾಮ್ರಾಜ್ಯಶಾಹಿ-ಪರ ನೀತಿಗಳನ್ನು ಅನುಸರಿಸಿದೆ.

ಅಧ್ಯಕ್ಷೀಯ ಪ್ರಜಾಪ್ರಭುತ್ವ :

1977ರ ನಂತರ ಶ್ರೀಲಂಕಾದ ರಾಜಕೀಯ ಧೋರಣೆಗಳಲ್ಲೂ ಜಯವರ್ಧನೆಯವರ ಸರಕಾರ ಭಾರಿ ಬದಲಾವಣೆ ತಂದಿದೆ. ಅಧಿಕಾರಕ್ಕೆ ಬಂದ ಕೆಲವು ತಿಂಗಳುಗಳಲ್ಲೇ ತನಗಿರುವ ಅತ್ಯಧಿಕ ಬಹುಮತದಿಂದ (168ರಲ್ಲಿ 140) ಸಂವಿಧಾನವನ್ನು ತಿದ್ದುಪಡಿ ಮಾಡಿ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಿಂದ, ಅಧ್ಯಕ್ಷೀಯ ಮಾದರಿಯ ಪ್ರಜಾಪ್ರಭುತ್ವ ಜಾರಿಗೆ ತರಲಾಗಿದೆ. ಜಯವರ್ಧನೆಯವರನ್ನು ಪ್ರಥಮ ಅಧ್ಯಕ್ಷರಾಗಿ ಘೋಷಿಸಲಾಗಿದೆ. ಹೊಸ ಸಂವಿಧಾನದ ಪ್ರಕಾರ ಅಧ್ಯಕ್ಷರ ಕೈಯಲ್ಲಿ ಅಪರಿಮಿತ ಅಧಿಕಾರ ಕೊಡಲಾಗಿದೆ. ಅಧ್ಯಕ್ಷರು ಪಾರ್ಲಿಮೆಂಟಿಗೆ ಜವಾಬ್ದಾರರಲ್ಲ. ಪಾರ್ಲಿಮೆಂಟ್ ರಬ್ಬರ್‌ಸ್ಟಾಂಪ್‌ನಂತಾಗಿದೆ. ಏಕಪಕ್ಷೀಯ ಸರ್ವಾಧಿಕಾರ ಬಲಗೊಳ್ಳುತ್ತಿದೆ.

UNP ನೇರ ಬಂಡವಾಳಶಾಹಿ–ಪರ ಸಾಮ್ರಾಜ್ಯಶಾಹಿ-ಪರ ನೀತಿಗಳನ್ನು ಅನುಸರಿಸುತ್ತಿದ್ದರೂ ಜನರನ್ನು ಮರುಳುಗೊಳಿಸಲು 'ಪ್ರಜಾಸತ್ತಾತ್ಮಕ ಸಮಾಜವಾದ' ಹಾಗೂ 'ಮುಕ್ತ ಹಾಗೂ ನ್ಯಾಯಯುತ ಸಮಾಜ' ತನ್ನ ಗುರಿ ಎನ್ನುತ್ತದೆ.

ಮುಕ್ತ ವಾಣಿಜ್ಯ ಕ್ಷೇತ್ರ ಹಾಗೂ ರಫ್ತು ಆಧಾರಿತ ಕೈಗಾರಿಕಾ ಬೆಳವಣಿಗೆಯಿಂದ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆ. ಮುಕ್ತ ವಾಣಿಜ್ಯ ಕ್ಷೇತ್ರದಿಂದಲೇ ಒಂದು ವರೆ ಲಕ್ಷ ಉದ್ಯೋಗ ಅವಕಾಶ ದೊರೆಯುತ್ತದೆ ಎಂದು ಭರವಸೆ ಇತ್ತಿದೆ. ಆದರೆ ಇನ್ನೂ 15 ಸಾವಿರ ಅವಕಾಶಗಳು ಲಭ್ಯವಾಗಿಲ್ಲ. ಜೀವನಾವಶ್ಯಕ ಸಾಮಗ್ರಿಗಳ ಬೆಲೆ ನಿಯಂತ್ರಣಕ್ಕೆ ಸಬ್ಸಿಡಿ ನೀಡಿದರೆ ಬೆಳವಣಿಗೆ ನಿಂತು ಹೋಗುತ್ತದೆ. ಸಬ್ಸಿಡಿಯ ಮೂಲಕ ಬೆಲೆ ನಿಯಂತ್ರಿಸುವ ಬದಲು ಅದನ್ನೇ ಬೆಳವಣಿಗೆಗೆ ಅಂದರೆ ಕೈಗಾರಿಕೆಗಳನ್ನು ಸ್ಥಾಪಿಸಲು ವಿದೇಶಿಯರನ್ನು ಆಕರ್ಷಿಸಲು ಸಬ್ಸಿಡಿಯಾಗಿ ಉಪಯೋಗಿಸಿದರೆ ಬೆಲೆ ಏರಿದರೂ ಉದ್ಯೋಗಾವಕಾಶ ಹೆಚ್ಚಿ, ಹೆಚ್ಚಿನ ಬೆಲೆಯಲ್ಲೂ ಜನಕೊಳ್ಳಲು ಸಾಧ್ಯವಾಗುತ್ತದೆ ಎಂಬ ವಾದವನ್ನು ಪ್ರಚಾರ ಮಾಡಲಾಗುತ್ತಿದೆ. ಆದರೆ ವಾಸ್ತವಿಕವಾಗಿ ಬೆಲೆಯೂ ಏರುತ್ತಿದೆ, ಉದ್ಯೋಗಾವಕಾಶ ಹೆಚ್ಚಿಲ್ಲ, ಕೊಳ್ಳುವ ಶಕ್ತಿಯೂ ಕಡಿಮೆಯಾಗುತ್ತಿದೆ. ಕೈಗಾರಿಕಾ ಬೆಳವಣಿಗೆ ಆಗದಿರುವುದು ಮಾತ್ರವಲ್ಲ ಈಗಾಗಲೇ ಸ್ಥಾಪಿತ ಕೈಗಾರಿಕೆಗಳೂ ಕುಂಠಿತವಾಗುತ್ತಿದೆ.

ಇದರಿಂದ ಜನರ ಅಸಂತೋಷ ಹೆಚ್ಚುತ್ತಿದೆ. ಜನರ ಗಮನವನ್ನು ಆರ್ಥಿಕ ಸಮಸ್ಯೆಗಳಿಂದ ಬೇರೆಡೆ ಸೆಳೆಯಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಸಿಂಹಳಿ ತಮಿಳರ ನಡುವಿನ ಘರ್ಷಣೆ ಮತ್ತು ತಮಿಳರ ಮೇಲೆ ಆಕ್ರಮಣ, ಅತ್ಯಾಚಾರ, ಇಂತಹ ಪ್ರಯತ್ನಗಳಲ್ಲೊಂದು. ಅತ್ಯಂತ ಪ್ರತಿಗಾಮಿ ನೀತಿಗಳನ್ನು ಸಮರ್ಥಿಸಲು ಜನರ ಧಾರ್ಮಿಕ ಭಾವನೆಗಳನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಧರ್ಮ ಹಾಗೂ ರಾಜಕಾರಣದ ಮಧುರ ಸಂಗಮದ 'ಧರ್ಮಿಷ್ಟ' ಸಮಾಜ ಪರಿಕಲ್ಪನೆಯನ್ನು ಮಂಡಿಸಲಾಗುತ್ತಿದೆ. UNP ಯ ರಾಜಕೀಯ ನೀತಿ 'ಸಂಕುಚಿತ ಗೊಡ್ಡು ಎಡಪಂಥೀಯತೆ'ಯೂ ಅಲ್ಲ. 'ನೀತಿಗೆಟ್ಟ, ಸಾಮಾಜಿಕ ಬೇಜವಾಬ್ದಾರಿಯ ಬಲಪಂಥೀಯತೆ'ಯೂ ಅಲ್ಲ. ಇವೆರಡನ್ನೂ ಮೀರಿದ ಮಾನವೀಯ, ನೈತಿಕ ಮೌಲ್ಯಗಳನ್ನು ಆಧರಿಸಿದ್ದು ಎಂದು ವಾದಿಸಲಾಗುತ್ತಿದೆ.

ಸರ್ಕಾರದ ಧೋರಣೆಗಳಿಗೆ ವಿರೋಧ ಮತ್ತು ದಬ್ಬಾಳಿಕೆ:

ಆದರೆ ಇವೆಲ್ಲವುಗಳಿಂದ ಜನರು ಮರುಳಾಗಿಲ್ಲ. ಏರುತ್ತಿರುವ ಬೆಲೆ, ನಿರುದ್ಯೋಗ, ಜನರನ್ನು ರೊಚ್ಚಿಗೆಬ್ಬಿಸಿದೆ. ಸ್ವಾಭಾವಿಕವಾಗಿಯೇ ಕಾರ್ಮಿಕ ವರ್ಗ ಬೇರೆಲ್ಲಾ ಜನವಿಭಾಗಗಳಿಗಿಂತ ಮೊದಲೇ ಹೋರಾಟಕ್ಕಿಳಿಯಿತು. 1978 ಸೆಪ್ಟೆಂಬರ್ 28 ದೇಶದಾದ್ಯಂತ ಬೆಲೆ ಏರಿಕೆ ವಿರುದ್ಧ ಎಲ್ಲಾ ಟ್ರೇಡ್ ಯೂನಿಯನುಗಳ ಜಂಟಿ ಸಮಿತಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತು. ಈ ಮುಷ್ಕರವನ್ನು ಸರ್ಕಾರ ತನ್ನೆಲ್ಲಾ ಶಕ್ತಿಯನ್ನುಪಯೋಗಿಸಿ ಹತ್ತಿಕ್ಕಿತು. ಅಂದಿನಿಂದ ಸರ್ಕಾರ ಒಂದಲ್ಲ ಒಂದು ಸರ್ವಾಧಿಕಾರವನ್ನು ಬಲಪಡಿಸುವ ಪ್ರಜಾಪ್ರಭುತ್ವ-ವಿರೋಧಿ ಕಾನೂನುಗಳನ್ನು ಜಾರಿಮಾಡುತ್ತಿದೆ.

ಇವುಗಳಲ್ಲಿ ಮುಖ್ಯವಾದದ್ದು Criminal Procedures (Special Provision) Law ಎಂಬುದು. ಇದರ 120ನೇ ಸೆಕ್ಷನ್ ಪ್ರಕಾರ ಸರ್ಕಾರದ ವಿರುದ್ಧ ಅಸಂತೃಪ್ತಿಯನ್ನು ಜನರಲ್ಲಿ ಉತ್ತೇಜಿಸುವ, ಕಾನೂನುಬದ್ಧವಲ್ಲದ ಯಾವುದೇ ವಿಧಾನದಿಂದ ಬದಲಾವಣೆ ತರಲು ಜನರನ್ನು ಪ್ರೋತ್ಸಾಹಿಸುವ, ವರ್ಗಗಳ

ಮಧ್ಯೆ ಘರ್ಷಣೆಯನ್ನು ಉತ್ತೇಜಿಸುವ ಯಾರನ್ನೇ ಆಗಲಿ ಬಂಧಿಸಬಹುದು ಹಾಗೂ ಇವರಿಗೆ ಜಾಮೀನು ಕೊಡಲಾಗುವುದಿಲ್ಲ. ಈ ಕಾನೂನು ವಿರುತ್ತಿರುವ ಅಪರಾಧಗಳನ್ನು ನಿಯಂತ್ರಿಸಲು ಎಂದು ಸರ್ಕಾರ ಹೇಳಿದೆ! ಆದರೆ ಈ ಕಾನೂನಿನ ಮೇಲೆ ಹೇಳಿದ ಸೆಕ್ಷನ್ ಪ್ರಕಾರ ಹರತಾಳ, ಮುಷ್ಕರಗಳಿಗೆ ಕರೆ ಕೊಡುವವರನ್ನೂ, ಸರ್ಕಾರವನ್ನು ಟೀಕಿಸುವ ಪೋಸ್ಟರು ಹಚ್ಚುವವರನ್ನೂ, ಅದರಲ್ಲೂ ಟ್ರೇಡ್ ಯೂನಿಯನ್ ನಾಯಕರನ್ನು, ವಿರೋಧ ರಾಜಕೀಯ ಪಕ್ಷಗಳ ಕಾರ್ಯಕರ್ತರನ್ನು ಪೀಡಿಸಲಾಗುತ್ತಿದೆ.

ಕಾರ್ಮಿಕ ವರ್ಗದ ಶಕ್ತಿಯನ್ನು ಅರಿತಿರುವ ಸರ್ಕಾರ, ಇದನ್ನು ಕುಂಠಿತಗೊಳಿಸಲು ಹಲವು ಕ್ರಮಗಳಿರುವ ಮಾಲಿಕ-ಕಾರ್ಮಿಕ ಸಂಬಂಧಗಳ ಬಗ್ಗೆ ಒಂದು ಶ್ವೇತಪತ್ರ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಮಂಡಿಸಿದೆ. ಇದರ ಪ್ರಕಾರ ಎಲ್ಲಾ ಕಡೆಯೂ ಉದ್ಯೋಗವನ್ನು ಪ್ರತಿತಿಂಗಳು ನವೀಕರಿಸಬಹುದಾದ ಕಾಂಟ್ರ್ಯಾಕ್ಟ್ ಎನ್ನಲಾಗಿದೆ. ಅಲ್ಲದೆ ಯಾವ ಮಾಲಿಕನೂ ಸ್ವಲ್ಪ ಪರಿಹಾರ ಕೊಟ್ಟು ಕೆಲಸದಿಂದ ತೆಗೆಯಲು, ಇದು ಅವಕಾಶ ಮಾಡಿಕೊಡುತ್ತದೆ. ಇಂತಹ ಕ್ರಮವನ್ನು ಯಾವುದೇ ಕೈಗಾರಿಕಾ ವಿವಾದಗಳ ಕಾಯಿದೆ ಪ್ರಕಾರ ಪ್ರಶ್ನಿಸುವಂತಿಲ್ಲ ಅಲ್ಲದೆ ಟ್ರೇಡ್ ಯೂನಿಯನುಗಳ ಬದಲು ಕಾರ್ಮಿಕ ಸಮಿತಿಗಳನ್ನು ನೇಮಿಸಲಾಗುವುದು. ಇದು ಸಿಲೋನ್ ಫೆಡರೇಷನ್ ಆಫ್ ಲೇಬರ್‌ನ ಡಾ॥ ಕೊಲ್ವಿನ್ ಡಿಸಿಲ್ವಾ ಶಬ್ದಗಳಲ್ಲಿ ಹೇಳುವುದಾದರೆ 'ಸ್ಥಾಪಿತ ಟ್ರೇಡ್ ಯೂನಿಯನುಗಳನ್ನು ಕಾರ್ಮಿಕ-ಮಾಲಿಕನ ಸಂಬಂಧಗಳ ಬಗ್ಗೆ ವ್ಯವಹರಿಸುವ ಸಾಂಸ್ಥಿತ ಚೌಕಟ್ಟಿನಿಂದ ಹೊರಗಿಡುವ ಪ್ರಯತ್ನ'.

ಶ್ರೀಲಂಕಾದ ಸಮಸ್ಯೆಗಳ ಮೂಲ :

ಶ್ರೀಲಂಕಾದ ಆರ್ಥಿಕತೆ ಆಮದು ಮತ್ತು ರಫ್ತಿನ ಮೇಲೆ ಆಧಾರಿತವಾದ ಆರ್ಥಿಕತೆ. ವಿದೇಶಿ ವಿನಿಮಯದ ಅಭಾವದಿಂದ ಕಳೆದ ದಶಕದಲ್ಲಿ ಆರ್ಥಿಕ ಬೆಳವಣಿಗೆ ಕುಂಠಿತವಾಗಿತ್ತು. ಸ್ವತಂತ್ರವಾದ ಮೇಲೆ, ಒಂದು ದಶಕದಲ್ಲಿ ಮಾಡಿದ ಯೋಜನಾರಹಿತ ಖರ್ಚಿನಿಂದ ವಿದೇಶಿ ವಿನಿಮಯದ ಸಮಸ್ಯೆ ಉಂಟಾಗಿದೆ. ಕಳೆದ ದಶಕದಲ್ಲಿ (70ರ ದಶಕದಲ್ಲಿ) ಆಗಿನ ಸರ್ಕಾರ ಆಮದು ನಿರ್ಬಂಧಗಳನ್ನು ಹೇರಿಯೂ ಪ್ರತಿವರ್ಷದ ರಫ್ತಿನಿಂದ ಸಿಗುವ ವಿದೇಶಿ ವಿನಿಮಯ ಸಾಲ ತೀರಿಸಲು ವ್ಯಯವಾಗುತ್ತದೆ.

ಆಮದಿನ ಶೇಕಡಾ 50 ಜೀವನಾವಶ್ಯಕ ಸಾಮಗ್ರಿಗಳು : ಅಕ್ಕಿ, ಹಿಟ್ಟು ಮತ್ತು ಸಕ್ಕರೆ. ಕೃಷಿಯೇ ಮುಖ್ಯವಾಗಿರುವ ಈ ದೇಶದಲ್ಲಿ ಅಕ್ಕಿ ಆವಶ್ಯಕತೆಯ ಶೇಕಡಾ 30 ಆಮದಾಗುತ್ತದೆ. ರಫ್ತಿನ ಶೇಕಡಾ 70 ಭಾಗ ಕಸುಕೃಷಿಯಿಂದಲೇ ಬರುತ್ತದೆ: ಚಹ, ರಬ್ಬರ್, ತೆಂಗು. ಈ ರೀತಿಯ 'ದ್ವಂದ್ವ' ಶ್ರೀಲಂಕಾದ ಆರ್ಥಿಕತೆಯ ವೈಶಿಷ್ಟ್ಯ. ವಸಾಹತುಶಾಹಿ ಆಳ್ವಿಕೆಯ ಪ್ರಸಾದ. ಆರ್ಥಿಕ ಬೆಳೆಗಳಿಗೆ ಮಾತ್ರ ಗಮನಕೊಟ್ಟು, ಜನರ ಅವಶ್ಯಕತೆಯನ್ನು ಪೂರ್ತಿ ನಿರ್ಲಕ್ಷಿಸಿದ್ದರ ಫಲ.

ಆರ್ಥಿಕ ಬೆಳೆಗಳ ಮೂಲಕ ಶ್ರೀಲಂಕಾ ಜಗತ್ತಿನ ಬಂಡವಾಳಶಾಹಿ ಪದ್ಧತಿಗೆ ಭದ್ರವಾಗಿ ಕಟ್ಟಿಹಾಕಲ್ಪಟ್ಟಿದೆ. ಇದರಿಂದಾಗಿ ಹಾಗೂ ಅಭಿವೃದ್ಧ ಬಂಡವಾಳಶಾಹಿ ದೇಶಗಳ ಜತೆ ಇರುವ ವಾಣಿಜ್ಯ ವಿಷಮತೆಯಿಂದಾಗಿ, ಬಂಡವಾಳಶಾಹಿ ಜಗತ್ತಿನಲ್ಲಾಗುವ ವ್ಯತ್ಯಾಸಗಳಿಂದ ತೀವ್ರ ಪರಿಣಾಮಕ್ಕೊಳಗಾಗುತ್ತದೆ. ಜೀವನಾವಶ್ಯಕ ವಸ್ತುಗಳು: ಅಕ್ಕಿ, ಗೋದಿಹಿಟ್ಟು ಇತ್ಯಾದಿಗಳ ಉತ್ಪಾದನೆಗೆ ಅಧಿಕ ಗಮನ ಕೊಡದೆ, ಆಮದಿನ ಮೇಲೆ ಅವಲಂಬಿಸಿದ್ದರೆ ಈ ಪರಿಣಾಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈ ವಿಷಚಕ್ರ ಮುಂದು ವರಿಯುತ್ತಾ ಹೋಗುತ್ತದೆ. ಜಯವರ್ಧನೆಯವರ ಸರ್ಕಾರ ಇದನ್ನೇ ಮಾಡುತ್ತಿದೆ.

ಎಡಪಕ್ಷಗಳ ಸ್ಥಿತಿ :

ಈ ಧೋರಣೆಗಳ ವಿರುದ್ಧ ಜನರನ್ನು ಸಂಘಟಿಸುವುದರಲ್ಲಿ, ಎಡಪಕ್ಷಗಳು ಪ್ರಮುಖ ಪಾತ್ರವಹಿಸಿವೆ. ಶ್ರೀಲಂಕಾ ಸಮಸಮಾಜಪಾರ್ಟಿ ಮತ್ತು ಕಮ್ಯುನಿಸ್ಟ್ ಪಾರ್ಟಿ ಪ್ರಮುಖ ಎಡಪಕ್ಷಗಳು. 1970ಕ್ಕೆ ಅಧಿಕಾರಕ್ಕೆ ಬಂದ ಸಂಯುಕ್ತ ರಂಗ ಸರ್ಕಾರದಲ್ಲಿ ಇವೆರಡು ಭಾಗವಹಿಸಿದ್ದವು. ಸಿರಿಮಾವೊ ಅವರ ನಾಯಕತ್ವದ ಈ ಸರ್ಕಾರ ಮಾಡಿದ ಭೂಸುಧಾರಣೆ, ಕೆಲವು ಪ್ಲಾಂಟೇಷನ್‌ಗಳ ರಾಷ್ಟ್ರೀಕರಣಕ್ಕೆ ಈ ಪಕ್ಷದ ಮಂತ್ರಿಗಳೇ ಮುಖ್ಯ ಕಾರಣ. ಈ ಕಾರಣದಿಂದಲೇ ಈ ಪಕ್ಷಗಳನ್ನು ಆಕೆ ಸರ್ಕಾರದಿಂದ ಹೊರದಬ್ಬಿ ತುರ್ತುಪರಿಸ್ಥಿತಿ ಜಾರಿಗೆ ತಂದಿದ್ದು. 1971ರಲ್ಲಿ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಇವು ಅಧಿಕ ಸಂಖ್ಯೆಯಲ್ಲಿ ಸದಸ್ಯರನ್ನು ಹೊಂದಿದ್ದವು ಸಮ್ಮಿಶ್ರ ಸರ್ಕಾರದಲ್ಲಿದ್ದೂ. ಸಿರಿಮಾವೊರವರ ಪಕ್ಷದ ರಾಜಕೀಯ ಆರ್ಥಿಕ ಧೋರಣೆಗಳನ್ನು ಬಯಲಿಗೆಳೆಯಲು ಸಾಧ್ಯವಾಗದೆ ಹೋದದ್ದು, ಮಾತ್ರವಲ್ಲ ಈ ಪಕ್ಷಗಳೇ 1970ರ ಸಂಯುಕ್ತ ರಂಗದ ಪ್ರಚಂಡ ವಿಜಯವನ್ನು ಸರಿಯಾದ ರೀತಿಯಲ್ಲಿ ವಿಶ್ಲೇಷಿಸದೆ ಸಿರಿಮಾವೊರವರ ಪಕ್ಷದ ಬಗ್ಗೆ ತಪ್ಪು ಭರವಸೆ ಇಟ್ಟುಕೊಂಡದ್ದು ಇವೆಲ್ಲದರ ಫಲವಾಗಿ 1977ರ ಚುನಾವಣೆಯಲ್ಲಿ ಒಂದೂ ಸೀಟು ಈ ಎಡಪಕ್ಷಗಳಿಗೆ ದೊರೆಯಲಿಲ್ಲ. ಜನರು ಈ ಎಡಪಕ್ಷಗಳನ್ನು ಸಿರಿಮಾವೊರವರ ಪಕ್ಷದಿಂದ ಬೇರ್ಪಡಿಸಿ ನೋಡಲಿಲ್ಲ. ಇವೆರಡು ಪಕ್ಷಗಳಲ್ಲದೆ ಜನತಾ ವಿಮುಕ್ತಿ ಪೆರುಮಾನ (ಜನತಾ ವಿಮೋಚನಾ ರಂಗ) ಎಂಬ ಮಾವೋವಾದಿ ಪಕ್ಷ ಸಹ ಅಸ್ತಿತ್ವದಲ್ಲಿದೆ. 1971 ರಲ್ಲಿ ಈ ಪಕ್ಷ ಮುಖ್ಯವಾಗಿ ಹಳ್ಳಿಯ ಯುವಜನರು ಭಾಗವಹಿಸಿದ ಅಸಫಲ ದಂಗೆಯ ನಾಯಕತ್ವವಹಿಸಿತ್ತು. ಈಗಲೂ ಅಲ್ಲಲ್ಲಿ ಪ್ರಬಲವಾಗಿದೆ.

UNP ಯ ದಿವಾಳಿಕೋರ ಧೋರಣೆಗಳಿಂದಾಗಿ ಜನತಾ ಹೋರಾಟಗಳು ಆರಂಭವಾಗಿದ್ದು, ಮಾವೋವಾದಿ ಪಕ್ಷದ ಹೊರತು ಉಳಿದ ಎಡಪಕ್ಷಗಳ ಐಕ್ಯರಂಗ ರಚನೆಯಾಗಿದ್ದು (1977ರ ಚುನಾವಣೆ ಹೊತ್ತಿಗೆ ಇದು ರಚನೆಯಾಗಿತ್ತು), ಇವು ಈ ಹೋರಾಟಗಳನ್ನು ಕ್ರಾಂತಿಕಾರಿ ಬದಲಾವಣೆಗಳತ್ತ ಒಯ್ಯಲು ನಾಯಕತ್ವ ವಹಿಸುವುವು ಎಂದು ಆಶಿಸಬೇಕಾಗಿದೆ.

●

ಎಸ್. ಎಫ್. ಐ. ವಿದ್ಯಾರ್ಥಿಗಳಿಂದ ಹೋಟೆಲ್ ತಿಂಡಿಗಳ ಬೆಲೆ ಏರಿಕೆಗೆ ತಡೆ !

ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಕಳೆದ ತಿಂಗಳಷ್ಟೇ ಎಸ್. ಎಫ್. ಐ. ಘಟಕ ರೂಪಗೊಂಡಿದ್ದು ತಾ. 10-2-80 ರಂದು ತಾತ್ಕಾಲಿಕ ಸಮಿತಿಯನ್ನೂ ನೇಮಕ ಮಾಡಿದ್ದು ಆ ಸಮಿತಿಯು ತೆಗೆದುಕೊಂಡ ಪ್ರಕಾರ ಇಂದಿಗೆ ಸುಮಾರು 150 ಜನ ಸದಸ್ಯರಿದ್ದಾರೆ.

ಇಂದಿನ ಸರ್ಕಾರದ ಆರ್ಥಿಕ ಧೋರಣೆಗಳಿಂದಾಗಿ ಅಗತ್ಯ ವಸ್ತುಗಳಾದ ಸಕ್ಕರೆ, ಸೀಮೆಎಣ್ಣೆಯ ಅಭಾವ ತೀವ್ರಗೊಂಡಿದ್ದು ನಾಗರೀಕರು ಮತ್ತು ಸಾರ್ವಜನಿಕರು ತತ್ತರಿಸುತ್ತಿದ್ದಾರೆ. ಇಲ್ಲಿ ಸುಮಾರು 5000 ವಿದ್ಯಾರ್ಥಿಗಳು ಕಾಲೇಜು ಮತ್ತು ಹೈಸ್ಕೂಲಿನಲ್ಲಿ ದಿನನಿತ್ಯ ತಿಂಡಿ ಮತ್ತು ಕಾಫಿಗಾಗಿ ಹೋಟೆಲ್‌ಗಳನ್ನು ಅವಲಂಬಿಸಿದ್ದಾರೆ.

1971ರಂದೀಚೆಗೆ, ತೀರ ಹೆಚ್ಚು ಬೆಲೆಯ ಏರಿಕೆಯಾದಾಗ 1975-76 ನೇ ವರ್ಷ ಸರ್ಕಾರ ಮಧ್ಯಪ್ರವೇಶಿಸಿ ತಿಂಡಿ ಬೆಲೆಗಳನ್ನು ನಿಗದಿಮಾಡಿತ್ತು. ಆದರೆ 1977-78ರಲ್ಲಿ ಸಕ್ಕರೆ, ಎಣ್ಣೆ ಮತ್ತು ಅಕ್ಕಿಯ ಬೆಲೆಗಳು ಕಡಿಮೆಯಾಗಿದ್ದವು. ಆಗಲೂ ಸಹ ಹೋಟೆಲ್ ಮಾಲಕರು ತಿಂಡಿಯ ಬೆಲೆಗಳನ್ನು ಕಡಿಮೆಮಾಡಲಿಲ್ಲ. ಆದರೆ ಈಗ ಸಕ್ಕರೆ, ಸೀಮೆಎಣ್ಣೆಯ ಬೆಲೆ ಏರಿದ್ದರೂ ಸಹ ಹೋಟೆಲುಗಳಲ್ಲೂ ಬೇಕಾದಷ್ಟು ಲಾಭ ಬರುತ್ತಿರುವುದು ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳ ಗಮನಕ್ಕೆ ಬಂದಿದೆ. ಇಂತಿದ್ದರೂ ಯಾವುದೇ ಸೂಚನೆಕೊಡದೆ ಇಲ್ಲಿನ ಹೋಟೆಲ್ ಮಾಲೀಕರು ತಾ. 29-2-80ರಿಂದ ಹಟಾತ್ತನೆ ಬೆಲೆಯನ್ನು ಏರಿಸಿದರು. ಇದಕ್ಕೆ ಪ್ರತಿಯಾಗಿ 3-3-80 ರಂದು ಸಂಬಂಧಪಟ್ಟ ಅಧಿಕಾರಿಗಳನ್ನು ವಿದ್ಯಾರ್ಥಿಗಳು ಭೇಟಿಯಾಗಿ ತಿಂಡಿ ಬೆಲೆಯನ್ನು ಏರಿಸಿದ್ದನ್ನು ಖಂಡಿಸಿದರು. ಹಾಗೂ ಮಾತುಕತೆಗಳಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಾಗ ಅಧಿಕಾರಿಗಳು ಅದಕ್ಕೆ ಅವಕಾಶ ಕಲ್ಪಿಸಿಕೊಡುವುದಾಗಿ ಭರವಸೆಕೊಟ್ಟು ತಾ. 8-3-80 ರಂದು ತ್ರಿಪಕ್ಷೀಯ ಸಭೆಯನ್ನು ಕರೆಯುವುದಾಗಿ ಹೇಳಿದರು. ಆದರೆ ತಾ. 8-3-80ರಂದು ಡಿ. ವೈ. ಎಸ್. ಪಿ. ಯವರು ಕಾರಣಾಂತರಗಳಿಂದ ಸಭೆಗೆ ಹಾಜರಾಗದಿದ್ದರಿಂದ ಸಭೆಯನ್ನು ಮುಂದೂಡಬೇಕಾಯಿತು. ಮುಂದಿನ ತ್ರಿಪಕ್ಷೀಯ ಸಭೆಯನ್ನು ನಡೆಸುವವರೆಗೂ ಹೋಟೆಲ್ ತಿಂಡಿ ಬೆಲೆಯನ್ನು ಏರಿಸಬಾರದೆಂದು ಇಲ್ಲಿಯ ತಹಸೀಲ್ದಾರ್ ಮತ್ತು ಚಿಂತಾಮಣಿ ಟೌನ್ ಸಬ್‌ಇನ್ಸ್‌ಪೆಕ್ಟರ್‌ರವರು ಮಾಲೀಕರಿಗೆ ಆದೇಶ ಕೊಟ್ಟಿರುವುದು ಇಲ್ಲಿನ ವಿದ್ಯಾರ್ಥಿಗಳ ಒಗ್ಗಟ್ಟಿನ ಫಲವಾಗಿದೆ.

ತಾ. 8-3-80 ರಂದು ಕರ್ನಾಟಕ ರಾಜ್ಯದ ಕಾರ್ಯದರ್ಶಿಯಾದ ಶ್ರೀ ಶಾಂತರೇಣುಕಾರಾಧ್ಯರವರು ಎಸ್. ಎಫ್. ಐ. ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಎಸ್. ಎಫ್. ಐ. ಘಟನೆಯನ್ನು ವರದಿಮಾಡಿದರು. ನಂತರ ಕೆಲವು ವಿದ್ಯಾರ್ಥಿಗಳು ಚರ್ಚೆಯಲ್ಲಿ ಭಾಗವಹಿಸಿ ಎಸ್. ಎಫ್. ಐ. ಘಟನೆಯನ್ನು ಪ್ರಶಂಸಿಸಿದರು. ಸಭೆಯಲ್ಲಿ ವಿದ್ಯಾರ್ಥಿಗಳು ಎಸ್. ಎಫ್. ಐ. ನ ತರಬೇತಿ ಶಿಬಿರ ಚಿಂತಾಮಣಿಯಲ್ಲಿ ನಡೆಯುವಂತೆ ಮಾಡಬೇಕೆಂದು ರಾಜ್ಯಸಮಿತಿಗೆ ಶಿಫಾರಸು ಮಾಡಿದರು. ಅದಕ್ಕೆ ತಗಲುವ ವೆಚ್ಚವನ್ನು ಸಾರ್ವಜನಿಕರಿಂದ ಸಂಗ್ರಹಿಸುವುದಾಗಿ ಇಲ್ಲಿನ ಎಸ್. ಎಫ್. ಐ. ವಿದ್ಯಾರ್ಥಿಗಳು ನಿಶ್ಚಯಿಸಿದ್ದಾರೆ.

○

"ರಾಜ್ಯದಲ್ಲಿ ಸೌಹಾರ್ದ ಕಾರ್ಯಚರಣೆ"

ಬಿಜಾಪುರ : ಬೇಡಿಕೆ ದಿನಾಚರಣೆ

ಕರ್ನಾಟಕ ರಾಜ್ಯ ಸಿ. ಐ. ಟಿ. ಯು. ಆದೇಶದ ಮೇರೆಗೆ ಕರ್ನಾಟಕ ರಾಜ್ಯದಲ್ಲಿಯ ಹೋರಾಡುತ್ತಿರುವ ಕಾರ್ಮಿಕರು ಹಾಗೂ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸರಕಾರದ ಗಮನ ಸೆಳೆದು ಅವುಗಳಿಗೆ ಪರಿಹಾರ ಒದಗಿಸುವಂತೆ ಒತ್ತಾಯ ಮಾಡಲು, ಮುನಿಸಿಪಲ್ ಕಾಮಗಾರ ಯೂನಿಯನ್ ಮತ್ತಿನ್ನಿತರ ಸಂಘಗಳ ಪರವಾಗಿ, ತಾ. 12ರಂದು ಮಧ್ಯಾಹ್ನ 1 ಗಂಟೆಗೆ ಗಾಂಧಿ ಚೌಕದಿಂದ ಮೆರವಣಿಗೆ ಹೊರಟು ಪ್ರಮುಖ ಬೀದಿಗಳಲ್ಲಿ ಸುತ್ತಾಡಿ ಡಿ. ಸಿ. ಆಫೀಸಿನ ಮುಂದೆ ಮತಪ್ರದರ್ಶನ ನಡೆಸಿ ಮನವಿಯನ್ನರ್ಪಿಸಿದರು. ಫುಡ್ ಅಸಿಸ್ಟೆಂಟರು ಮತಪ್ರದರ್ಶನ ಮಾಡುವಲ್ಲಿಗೆ ಬಂದು ಕಾರ್ಡಿಗೆ 5 ಕೆ. ಜಿ. ಸಕ್ಕರೆ ವಿತರಣೆ ಮಾಡಲು ಇಂದೇ ಪರ್ಮಿಟ್ ಕೊಡಲಾಗಿದೆಯೆಂದು ಸಾರಿದರು. ಎಡಿಶನಲ್ ಡಿ. ಸಿ. ಯವರು ಬಂದು ಇತರ ಬೇಡಿಕೆಗಳನ್ನು ಸರಕಾರಕ್ಕೆ ಕಳುಹಿಸಿಕೊಡಲಾಗುವುದೆಂದು ಹೇಳಿದರು. ಕಾರ್ಮಿಕ ಮುಖಂಡರಾದ ಎನ್. ಕೆ. ಉಪಾಧ್ಯಾಯ, ವಿ. ಎಂ. ಸೊನ್ನದ, ಭೀಮಸಿ ಕಲಾದಗಿ, ಜಿಕ್ರಿಯಾಸಾಬ ಕಾಲೇಬಾಗ, ಮಾಜಿ ಮುನಿಸಿಪಲ್ ಸದಸ್ಯ ಎಂ. ಎಫ್. ಇನಾಮದಾರ ಮೊದಲಾದವರು ಮತಪ್ರದರ್ಶನದ ಮುಖಂಡತ್ವ ವಹಿಸಿದ್ದರು. 5 ಕೆ. ಜಿ. ಸಕ್ಕರೆ ಕೊಡಬೇಕೆಂದೂ, ನಗರಸಭೆ ನೌಕರದಾರರಿಗೆ ಹೆಚ್ಚಿನ ತುಟ್ಟಿಭತ್ತೆಯನ್ನು ಕೂಡಲೇ ಮಂಜೂರು ಮಾಡಬೇಕೆಂದೂ ತಾತಗುಣಿ ಎಸ್ಟೇಟಿನ ಕಾರ್ಮಿಕರಿಗೆ ನ್ಯಾಯಕೊಡಿಸಬೇಕೆಂಬ 9 ಬೇಡಿಕೆಗಳ ಮನವಿಯನ್ನರ್ಪಿಸಲಾಯಿತು.

ಕುಣಿಗಲ್ಲು : ಸಕ್ಕರೆ-ಸೀಮೆ ಎಣ್ಣೆ ಅಭಾವ ತೊಲಗಲಿ !

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಕುಣಿಗಲ್ ಶಾಖೆಯ ವತಿಯಿಂದ ಕುಣಿಗಲ್ ಟೌನ್ ಮತ್ತು ತಾಲ್ಲೂಕಿನ ಜನತೆಗೆ ಸಕ್ಕರೆ, ಸೀಮೆ ಎಣ್ಣೆಯನ್ನು ಸರಬರಾಜು ಮಾಡದೆ ಇರುವ ತಾಲ್ಲೋಕ್ ತಹಶೀಲ್ದಾರರ ವಿರುದ್ಧ ಹಸ್ತಪತ್ರಿಕೆ ಹಾಕಿಸಿ, ಹಂಚಿ ಜನತೆಯ ಸಹಿ ಸಂಗ್ರಹಿಸಿ ತಾ.12-3-80ರಂದು ತಹಶೀಲ್ದಾರರ ಕಛೇರಿ ಎದುರು ಸತ್ಯಾಗ್ರಹ ನಡೆಸಬೇಕೆಂದು ಪಾರ್ಟಿಯ ತೀರ್ಮಾನದ ಪ್ರಕಾರ ಕಾರ್ಯಾರಂಭವಾಯಿತು. ತಾ॥ 11-3-80ನೇ ಮಂಗಳವಾರ ತುಮಕೂರು ಜಿಲ್ಲಾ ಉಪವಿಭಾಗಾಧಿಕಾರಿಯಾದ ಅಸಿಸ್ಟೆಂಟ್ ಕಮಿಷನರು ಕುಣಿಗಲ್ಲಿಗೆ ಭೇಟಿನೀಡಿ ಪಾರ್ಟಿಯ ಮುಖಂಡರುಗಳಾದ ಕಾಂ. ಬಡೇಸಾಬ್, ಯೂನೂಸ್‌ಖಾನ್, ಅಂಜಪ್ಪನವರುಗಳನ್ನು ಕರೆಸಿ "ಸತ್ಯಾಗ್ರಹದ ಬಗ್ಗೆ ನಾನು ನೀವು ಹಾಕಿಸಿದ ಹಸ್ತಪತ್ರಿಕೆಯನ್ನು ನೋಡಿರುತ್ತೇನೆ. ಅದರಲ್ಲಿ ನೀವು ಕೆಲವು ಆಪಾದನೆಗಳನ್ನು ತಹಶೀಲ್ದಾರರ ಬಗ್ಗೆ ಮಾಡಿರುವುದು ಸಹಜವಾಗಿರುತ್ತೆ. ಅಪ್ರಯುಕ್ತ ಕುಣಿಗಲ್ ಟೌನ್ ಸೊಸೈಟಿಯವರನ್ನು ಈ ದಿನ ಸಂಜೆ ಕರೆಸಿ ಇನ್ನು ಮುಂದೆ ಜನತೆಗೆ ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಸಕ್ಕರೆ, ಸೀಮೆ ಎಣ್ಣೆ, ಅಕ್ಕಿ, ಗೋಧಿಯನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಿಸುತ್ತೇನೆಂದು ಭರವಸೆಕೊಟ್ಟು ನಿಮ್ಮ ಸತ್ಯಾಗ್ರಹವನ್ನು ವಾಪಸ್ ತೆಗೆಯಬೇಕೆಂದು ಕೇಳಿದರು. ಅದಕ್ಕೆ ಒಪ್ಪಿ ಒಂದು ವೇಳೆ ಸರಿಯಾಗಿ ಜನತೆಗೆ ಸಕ್ಕರೆ, ಸೀಮೆಎಣ್ಣೆ, ಅಕ್ಕಿ ಇವುಗಳನ್ನು ಸಕಾಲಕ್ಕೆ ಒದಗಿಸದಿದ್ದರೆ ಜನತೆಯನ್ನು ಮತ್ತೆ ಸಂಘಟನೆ ಮಾಡಿ ಒಂದು ದೊಡ್ಡ ರೀತಿಯ ಕಾರ್ಯಕ್ರಮ ಹಾಕಬೇಕಾಗುತ್ತೆ ಎಂದು ಹೇಳಿ ತಾರೀಖು 12-3-80 ರಂದು ಹಾಲಿ ಸಹಿ ಸಂಗ್ರಹವಾಗಿದ್ದ ಅರ್ಜಿಯನ್ನು ತಹಶೀಲ್ದಾರ್‌ರವರಿಗೆ ಕೊಡಲಾಯಿತು.

○

(6ನೇ ಪುಟ ನೋಡಿ)

ಮೂಡಿಗೆರೆ :

ತಾರೀಕು 12-3-1980 ರಂದು ಸಿ. ಐ. ಟಿ. ಯು. ರಾಜ್ಯ ಸಮಿತಿಯು ಕರೆಯ ಮೇರೆಗೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ಕಾಂ. ಎ. ಸಿ. ಕೇಶವ ಮತ್ತು ಕೆ. ಸುಕುಮಾರ್‌ರವರ ನೇತೃತ್ವದಲ್ಲಿ ತೋಟ ಕಾರ್ಮಿಕರು ಬೇಡಿಕೆ ದಿನವನ್ನು ಆಚರಿಸಿದರು.

ತೋಟ ಕಾರ್ಮಿಕರು ಮಾರ್ಕೆಟ್ ರೋಡಿನಿಂದ ಹೊರಟು, ಮಹಾತ್ಮ ಗಾಂಧಿ ರಸ್ತೆಯ ಮೂಲಕ ಕಡೂರು ಮಂಗಳೂರು ಮಾರ್ಗವನ್ನು ಹಾದು ಮಹಿಳಾ ಕಾರ್ಮಿಕರೂ ಇದ್ದ ಮೆರವಣಿಗೆಯಲ್ಲಿ ಘೋಷಣೆಗಳನ್ನು ಕೂಗುತ್ತಾ ತಹಸೀಲ್‌ದಾರ್ ಆಫೀಸಿಗೆ ಬಂದು ಧರಣಿ ಸತ್ಯಾಗ್ರಹ ನಡೆಸಿದರು. ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ ಉಪಾಧ್ಯಕ್ಷರಾದ ಕಾಂ. ಎ. ಸಿ. ಕೇಶವ ಮತ್ತು ಉಪಕಾರ್ಯದರ್ಶಿಯವರಾದ ಕೆ. ಸುಕುಮಾರ್‌ರವರು ಕಾರ್ಮಿಕರ ಪರವಾಗಿ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ತಹಸೀಲ್‌ದಾರ್‌ರವರಿಗೆ ಅರ್ಪಿಸಿದರು. ತಹಸೀಲ್‌ದಾರ್‌ರವರು ಮೇಲಧಿಕಾರಿಗಳಿಗೆ ಕಳುಹಿಸುವುದಾಗಿ ಧರಣಿ ಮಾಡುತ್ತಿದ್ದ ಕಾರ್ಮಿಕರ ಮುಂದೆ ಬಂದು ಆಶ್ವಾಸನೆ ಇತ್ತರು. ಸಿ. ಐ. ಟಿ. ಯು. ರಾಜ್ಯ ಸಭೆಯ ಕರೆಯಂತೆ ಸಂಜೆ ನಾಲ್ಕುವರೆ ಗಂಟೆಯವರೆಗೆ ಬಿಸಿಲಿನಲ್ಲಿಯೇ ಧರಣಿ ಕೂತು, ನಂತರ ಮೆರವಣಿಗೆಯಲ್ಲಿ ಪುನಃ ಗಾಂಧಿನಗರ ಮಾರ್ಗವಾಗಿ ಮಾರ್ಕೆಟ್ ರೋಡಿಗೆ ಹೋಗಿ ಅಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯ್ತು. ಕಾಂ. ಎ. ಸಿ. ಕೇಶವರು ಬಹಿರಂಗ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಕೆ. ಸುಕುಮಾರ್‌ರವರು ಧನ್ಯವಾದ ಅರ್ಪಿಸಿದರು.

○

ಚಿಕ್ಕಬಳ್ಳಾಪುರ :

ತಾ. 12-3-80 ರಂದು ಸಿ. ಐ. ಟಿ. ಯು. ರಾಜ್ಯಸಮಿತಿ ಕರೆಯ ಮೇರೆಗೆ ಬೇಡಿಕೆಗಳ ದಿನಾಚರಣೆಯನ್ನು ಆಚರಿಸಲಾಯಿತು. ಇಲ್ಲಿನ ಕೃಷಿಕಾರ್ಮಿಕರು ಕಾಂ. ಕಾಂತರಾಜ್, ಸತ್ಯನಾರಾಯಣರಾವ್‌ರವರ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ಬಂದು ಎ. ಸಿ. ಆಫೀಸಿನ ಮುಂಬಾಗದಲ್ಲಿ ಸೇರಿದರು. ಆಮೇಲೆ ಕಾಂ. ಎಸ್. ಲಕ್ಷ್ಮಯ್ಯನವರ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ 11 ಘಂಟೆಯಿಂದ ಸಾಯಂಕಾಲ 5-30 ಘಂಟೆಯವರೆವಿಗೂ ನಡೆಯಿತು. ಈ ಸತ್ಯಾಗ್ರಹದಲ್ಲಿ ಬಹಳ ಜನ ಸ್ತ್ರೀಯರು ಭಾಗವಹಿಸಿದ್ದರು. ಇವರ ನೇತೃತ್ವವನ್ನು ನಂಜಮ್ಮ, ತೆರೇಸಮ್ಮ, ಚಿನ್ನಮ್ಮ, ಅಶ್ವತ್ಥಮ್ಮ ಮೊದಲಾದವರು ವಹಿಸಿದ್ದರು.

ಸಂಜೆ 5-30 ಘಂಟೆಯಾದ ಮೇಲೆ ಬೇಡಿಕೆಗಳ ಮನವಿಪತ್ರವನ್ನು ಸರ್ಕಾರಕ್ಕೆ ಕಳುಹಿಸಲು ಅಸಿಸ್ಟಾಂಟ್ ಕಮಿಷನರ್‌ರವರಿಗೆ ಕೊಡಲಾಯಿತು. ○

ಚಿಕ್ಕಮಗಳೂರಿನಲ್ಲಿ :

ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಕರೆಯ ಪ್ರಕಾರ ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ತೋಟಕಾರ್ಮಿಕರು, ಕುದುರೆಮುಖದ ಎಚ್. ಎಸ್. ಸಿ. ಎಲ್. ಎಂಪ್ಲಾಯೀಸ್ ಅಸೋಸಿಯೇಶನ್‌ನ ಪ್ರತಿನಿಧಿಗಳು ಕಾಂ. ಸಿ. ನಂಜುಂಡಪ್ಪ ಮತ್ತು ಚಿಕ್ಕಮಗಳೂರಿನ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಸಂಚಾಲಕರಾದ ಕಾಂ. ಬಿ. ಎಲ್. ಕೋಡಿನಾಯರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರದರ್ಶನ ನಡೆಸಿ ಧರಣಿ ಮುಷ್ಕರ ಆಚರಿಸಿದರು.

ಬೆಲೆಯೇರಿಕೆಯನ್ನು ತಡೆಯುವುದು, ಏರಿರುವ ಬೆಲೆಗಳನ್ನು ಇಳಿಸುವುದು, ದಿನಬಳಕೆಯ ಜೀವನಾವಶ್ಯಕ ವಸ್ತುಗಳ ವಿತರಣೆ, ತಾತಗುಣಿ ಎಸ್ಟೇಟಿನ ಕಾರ್ಮಿಕರ ಹೋರಾಟಕ್ಕೆ ಬೆಂಬಲ, ಸಂಯುಕ್ತ ಕರ್ನಾಟಕ ಬೆಂಗಳೂರು ಆವೃತ್ತಿಯ ನೌಕರರ ಚಳುವಳಿಗೆ ಬೆಂಬಲ, ಚೆಟ್ಟಳ್ಳಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ, ರಾಜ್ಯದ ಸ್ಟೈಫಂಡರಿ ಪದವೀಧರರ ಬೇಡಿಕೆಗಳಿಗೆ ಬೆಂಬಲ ಮತ್ತು ತೋಟ ಕೈಗಾರಿಕೆಯಲ್ಲಿ ಒಪ್ಪಂದದ ಪ್ರಕಾರ ಇರುವ ಕೂಲಿಯನ್ನು ಕನಿಷ್ಟ ಕೂಲಿಯನ್ನಾಗಿ ನಿರ್ಣಯಿಸಬೇಕು ಇತ್ಯಾದಿ ಬೇಡಿಕೆಗಳನ್ನುಳ್ಳ ಮನವಿಯನ್ನು ಜಿಲ್ಲಾಧಿಕಾರಿಯವರು ಇಲ್ಲದಿದ್ದುದರಿಂದ ಅವರ ಸಹಾಯಕರಾದ ಶ್ರೀಕಾಂತ್‌ರವರಿಗೆ ಅರ್ಪಿಸಲಾಯಿತು.

○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ವಿಧಾನಸಭೆಗಳ ವಿಸರ್ಜನೆಗೆ ಪ್ರತಿಭಟನೆ

ಒಂಬತ್ತು ರಾಜ್ಯಗಳ ಚುನಾಯಿತ ವಿಧಾನಸಭೆಗಳ ವಿಸರ್ಜನೆಯ ಕೇಂದ್ರ ಸರ್ಕಾರಿ ಕ್ರಮವನ್ನು ಪ್ರತಿಭಟಿಸಿ ದೇಶದ ಹಲವಾರು ರಾಜ್ಯಗಳಲ್ಲಿ ಪ್ರದರ್ಶನ, ಮೆರವಣಿಗೆಗಳು ನಡೆಯುತ್ತಿವೆ.

ಪಶ್ಚಿಮ ಬಂಗಾಳದ ವಿಧಾನಸಭೆಯಲ್ಲಿ ಮತ್ತು ರಾಜ್ಯದ ಹಲವಾರು ಕಡೆಗಳಲ್ಲಿ ಪ್ರತಿಭಟನೆಯನ್ನು ವ್ಯಕ್ತಪಡಿಸಲಾಯಿತು. ವಾಮರಂಗ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷಗಳು ವಿಧಾನಸಭೆ ಕಟ್ಟಡದ ಮುಂದೆ ಒಂದು ಭಾರಿ ರ್‍ಯಾಲಿಯನ್ನು ಏರ್ಪಡಿಸಿದ್ದರು. ವಾಮರಂಗ ಸಮಿತಿ ಅಧ್ಯಕ್ಷ ಪ್ರಮೋದ್‌ದಾಸಗುಪ್ತ ಅವರು ಅಧ್ಯಕ್ಷತೆ ವಹಿಸಿದ್ದ ಈ ರ್‍ಯಾಲಿಯಲ್ಲಿ ವಾಮರಂಗ ಸರ್ಕಾರದ ವಿರುದ್ಧ ಕಾಂಗ್ರೆಸ್ (ಐ) ನವರು ಕೈಗೊಳ್ಳುವ ಎಲ್ಲ ಪಿತೂರಿಗಳನ್ನು ವಿಫಲಮಾಡುವ ಪ್ರತಿಜ್ಞಾಪೂರ್ವಕ ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ರ್‍ಯಾಲಿಯಲ್ಲಿ ಮಾತನಾಡಿದ ಜ್ಯೋತಿಬಸು ಅವರು ವಿಸರ್ಜಿತ ಒಂಬತ್ತು ರಾಜ್ಯಗಳಲ್ಲಿನದಕ್ಕಿಂತ, ಕೇಂದ್ರಾಡಳಿತವಿರುವ ಅಸ್ಸಾಂನಲ್ಲೇ ಕಾನೂನು ಹೆಚ್ಚು ಹದಗೆಟ್ಟಿರುವುದು ಎಂದರು. ಅಸ್ಸಾಂನ ಬಿಕ್ಕಟ್ಟು, ಬೆಲೆಏರಿಕೆ ಇವುಗಳನ್ನು ಪರಿಹರಿಸದೆ ಇಂದಿರಾಗಾಂಧಿಯವರು ಸಂವಿಧಾನದ 356ನೇ ವಿಧಿಯನ್ನು ಪ್ರಯೋಗಿಸಿ ವಿಸರ್ಜನೆ ನಡೆಸಿದ್ದಾರೆ, ಈ 356ನೇ ವಿಧಿಯನ್ನು ತೆಗೆದುಹಾಕಬೇಕು ಎಂದು ಸಿ.ಪಿ.ಐ.ನ ವಿಶ್ವನಾಥ್‌ಮುಖರ್ಜಿಯವರು ಹೇಳಿದರು.

ಕೇಂದ್ರದ ಈ ಕ್ರಮವನ್ನು ಖಂಡಿಸುವ ನಿರ್ಣಯವನ್ನು ಪ. ಬಂಗಾಳದ ವಿಧಾನಸಭೆಯಲ್ಲೂ ತೆಗೆದುಕೊಳ್ಳಲಾಯಿತು.

ಮಹಾರಾಷ್ಟ್ರದಲ್ಲಿ ಹಲವಾರು ಕಡೆಗಳಲ್ಲಿ ಪ್ರತಿಭಟನಾ ಪ್ರದರ್ಶನ ನಡೆಯಿತು. ಒಂಬತ್ತು ರಾಜ್ಯಗಳಲ್ಲಿ ಮಹಾರಾಷ್ಟ್ರವೂ ಸೇರಿದೆ. ಸಿ.ಪಿ.ಐ.(ಎಂ)ನ ಮುಂಬಯಿ ಸಮಿತಿ, ಸಿ.ಪಿ.ಐ ಮತ್ತು ರೈತಕಾರ್ಮಿಕ ಪಕ್ಷಗಳು ಒಟ್ಟಾಗಿ ಈ ಪ್ರತಿಭಟನಾ ಸಭೆಯನ್ನು ನಡೆಸಿದವು. ಸಭೆಯಲ್ಲಿ ಮಾಜಿ ಸಚಿವ ಎನ್. ಡಿ. ಪಾಟೀಲ್, ಸಿ.ಪಿ.ಐ.ನ ಎಲ್.ಎಸ್. ಕಾರ್ಖಾನಿಸ್, ಸಿ.ಪಿ.ಎಂ.ನ ಅಹಲ್ಯಾ ರಂಗ್ಣೇಕರ್ ಮಾತನಾಡಿದರು. ಪಿ. ಕೆ. ಖುರಾನೆ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯನ್ನು ಸಿ.ಪಿ.ಎಂ.ನ ಡಾ. ಎ. ಬಿ. ಸಾವಂತ್ ಸ್ವಾಗತಿಸಿದರು.

ಮುಂಬಯಿ ಸಮಿತಿಯ ಆಶ್ರಯದಲ್ಲಿ ಒಂದುವಾರ ಪ್ರತಿಭಟನಾ ಕಾರ್ಯಕ್ರಮ ನಡೆಯಿತು. ಉತ್ತರ ಮುಂಬಯಿಯ ಭಾಂಡುಪ್‌ನಲ್ಲಿ, ವೊರ್ಲಿಯಲ್ಲಿ, ನೈಗಾವ್‌ನಲ್ಲಿ, ಧರವಿಯಲ್ಲಿ ಸಭೆಗಳು ನಡೆದವು. ಥಾಣೆ, ನಾಸಿಕ್ ಜಿಲ್ಲೆಗಳಲ್ಲಿ, ಕೊಲಾಬಾ ಜಿಲ್ಲೆಯಲ್ಲಿ, ಇಚಲ್‌ಕಾರಂಜಿಯಲ್ಲಿ, ನಾಗಪುರದಲ್ಲಿ ಇಂಥ ಪ್ರತಿಭಟನಾ ಪ್ರದರ್ಶನ ನಡೆದವು.

○

ಹುಬ್ಬಳ್ಳಿಯಲ್ಲಿ ಪಕ್ಷದ ಹಿತೈಷಿಗಳ ಸಭೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಮತ್ತು ಹಿತೈಷಿಗಳ ಸಭೆಯು ತಾ. 15-3-80ರಂದು ಸಂಜೆ ಹುಬ್ಬಳ್ಳಿಯಲ್ಲಿ ಸವಿತಾ ಬುಕ್ ಹೌಸಿನ ಹಾಲಿನಲ್ಲಿ ಸೇರಿತು. "ಲೋಕಸಭಾ ಚುನಾವಣೆ ಮುಗಿದ ಮೇಲೆ ಉಂಟಾಗಿರುವ ಹೊಸ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಸರ್ವಾಧಿಕಾರ ಶಕ್ತಿಯನ್ನು ಸೋಲಿಸಲು ವಿಶಾಲ ತಳಹದಿಯ ಐಕ್ಯಹೋರಾಟಗಳನ್ನು ನಡೆಸಬೇಕಾಗಿದೆ; ಸರ್ವಾಧಿಕಾರಿ ಶಕ್ತಿಯನ್ನು ಹಿಮ್ಮೆಟ್ಟಿಸುವುದು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯಿಂದ ಮಾತ್ರ ಸಾಧ್ಯ ಎಂಬುದನ್ನು ಪಶ್ಚಿಮ ಬಂಗಾಲ, ತ್ರಿಪುರಾ ಮತ್ತು ಕೇರಳ ರಾಜ್ಯಗಳಲ್ಲಿನ ಫಲಿತಾಂಶವು ತೋರಿಸಿಕೊಟ್ಟಿದೆ. ಈ ರೀತಿಯ ಐಕ್ಯತೆಯು ನಿರ್ದಿಷ್ಟ ಕಾರ್ಯಕ್ರಮಗಳ ಮತ್ತು ಹೋರಾಟಗಳ ಮೂಲಕವೇ ಬೆಳೆಯಲು ಸಾಧ್ಯ. ತ್ರಿಪುರಾ, ಬಂಗಾಲ ಮತ್ತು ಕೇರಳಗಳಲ್ಲಿನ ಜಯವನ್ನು ಭದ್ರಗೊಳಿಸಿ, ಉಳಿದ ರಾಜ್ಯಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಿಷ್ಠಗೊಳಿಸಿ, ಒಗ್ಗಟ್ಟಾಗಿ ಮುನ್ನಡೆಯಬೇಕಾಗಿದೆ. ಇವೆಲ್ಲಾ ಮಾಡಬೇಕಾದರೆ ನಮ್ಮ ಪಕ್ಷವು ಮತ್ತು ಸಾಮೂಹಿಕ ಸಂಘಟನೆಗಳು ಬಲಗೊಳ್ಳಬೇಕಾಗಿದೆ. ಇತ್ತೀಚಿನ ಬೆಳವಣಿಗೆಗಳಿಂದ ನಮ್ಮ ಪಕ್ಷದ ಪ್ರತಿಷ್ಠೆ ಮತ್ತು ಜವಾಬ್ದಾರಿ-ಇವೆರಡೂ ಹೆಚ್ಚಿವೆ. ಇದನ್ನು ಅರಿತು ಈ ಪ್ರದೇಶದಲ್ಲಿ ಪಕ್ಷವನ್ನು ಬಲಪಡಿಸಲು ಮತ್ತು ಸಾಮೂಹಿಕ ಸಂಘಟನೆಗಳನ್ನು ರಾಜಕೀಯವಾಗಿ ಬೆಳೆಸಲು ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರು ಕರೆ ಇತ್ತರು.

●

ಯುವಜನರ ವಿಸ್ತೃತ ಸಭೆ

ದ. ಕ. ಜಿಲ್ಲೆ ಮಂಗಳೂರು ತಾಲ್ಲೂಕು ಮಟ್ಟದ ಯುವಜನರ ವಿಸ್ತೃತ ಸಭೆ ತಾ. 7-3-80 ರಂದು ಕಾಂ. ಯು. ಬಿ. ನಾರಾಯಣರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಂ. ಉಮಾನಾಥ್ ಸ್ವಾಗತಿಸಿ, ಚಟುವಟಿಕೆಗಳ ವರದಿಯನ್ನಿತ್ತರು.

ಮುಖ್ಯ ಅತಿಥಿಯಾಗಿ ಬಂದಿದ್ದ ಕಾಂ. ಶ್ರೀರಾಮರೆಡ್ಡಿಯವರು ರಾಜ್ಯದ ವಿವಿಧ ಭಾಗಗಳಲ್ಲಿ ಬೆಳೆಯುತ್ತಿರುವ ಯುವಜನ ಚಳುವಳಿಯ ಬಗ್ಗೆ ವಿವರಣೆ ನೀಡಿದರು. ಕಾಂ. ಕೆ. ಆರ್. ಶ್ರೀಯಾನ್‌ರವರು ಮಾತನಾಡುತ್ತಾ ಯುವಜನರ ಸಮಸ್ಯೆಗಳು ಬಗೆಹರಿಯಬೇಕಾದರೆ ಸದ್ಯದ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆ ಅನಿವಾರ್ಯವೆಂದು ತಿಳಿಸಿದರು.

ಯುವಜನ ಮುಂದಾಳು ಕಾಂ. ಕೆ. ಶಂಕರ್ ಮತ್ತು ವಿದ್ಯಾರ್ಥಿ ಮುಖಂಡ ಕಾಂ. ಆನಂದಗಟ್ಟಿಯವರು, ರಾಯಚೂರಿನಲ್ಲಿ ನಡೆಯಲಿರುವ ಯುವಜನ ಸಮಾವೇಶವನ್ನು ಯಶಸ್ವಿಗೊಳಿಸುವ ಅಗತ್ಯವನ್ನು ತಿಳಿಸಿದರು.

ಹತ್ತು ಜನರ ಸಂಘಟನಾ ಸಮಿತಿಯೊಂದನ್ನು ರಚಿಸಲಾಗಿದ್ದು ಕಾಂ. ಉಮಾನಾಥ್ ಸಂಚಾಲಕರಾಗಿ ಆಯ್ಕೆಯಾಗಿದ್ದಾರೆ.

ಕಾಂ. ಶ್ರೀರಾಮರೆಡ್ಡಿಯವರು ಬೆಳೆಯುತ್ತಿರುವ ಸಮಸ್ಯೆಗಳ ಒತ್ತಡದಲ್ಲಿ ರಾಯಚೂರಿನಲ್ಲಿ ಯುವಜನ ಸಮಾವೇಶ ನಡೆಯುತ್ತಿರುವುದರ ಮಹತ್ವ ಹಾಗೂ ಯುವಜನರ ಸಮಸ್ಯೆಗಳ ಬೇರೆ, ಬೇರೆ ಮುಖಗಳನ್ನು ವಿವರಿಸಿದರು.

ಏಪ್ರಿಲ್‌ನಲ್ಲಿ ಜರುಗುವ ಸಮಾವೇಶಕ್ಕೆ ಹೆಚ್ಚಿನ ಪ್ರತಿನಿಧಿಗಳನ್ನು ಕಳಿಸಲು ಗ್ರಾಮಸಮಿತಿಗಳನ್ನು ರಚಿಸುವುದರ ಮೂಲಕ ಪ್ರಚಾರ ಮತ್ತು ಸಂಘಟನೆಯನ್ನು ಬಲಪಡಿಸಲು ಸಭೆ ನಿರ್ಧರಿಸಿತು.

●

ಬೀಡಿ ಕಾರ್ಮಿಕರ ಸಭೆ

ದ. ಕ. ಜಿಲ್ಲಾ ಬಂಟ್ವಾಳ ತಾಲ್ಲೂಕು ಸಜೀವ ಪ್ರದೇಶದ ಬೀಡಿ ಕಾರ್ಮಿಕರ ಸಭೆಯು ತಾ. 16-3-80 ರಂದು ಎಸ್. ಬಾವಬ್ಬಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಸಜೀವ ಪ್ರದೇಶ ಬೀಡಿಕಾರ್ಮಿಕರ ಸಮಿತಿಯ ಕಾರ್ಯದರ್ಶಿ ಕಾಂ. ಎಸ್. ಕೃಷ್ಣಪ್ಪ ಸಾಲಿಯಾನ್‌ರು ಸ್ವಾಗತಿಸಿದರು.

ಬಳಿಕ ಬಂಟ್ವಾಳ ತಾಲ್ಲೂಕು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಬಿ. ನಾರಾಯಣ ಮತ್ತು ಕಾಂ. ಬಿ. ವಾಸುಗಟ್ಟಿಯವರು ಮಾತನಾಡಿ, ಬೀಡಿಕಾರ್ಮಿಕರು ಸಂಘಟಿತರಾಗಿ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಹೋರಾಟ ನಡೆಸಬೇಕೆಂದೂ, ಏಪ್ರಿಲ್ ತಿಂಗಳ ತಾ. 5, 6, 7, ರಂದು ಮಂಗಳೂರಲ್ಲಿ ನಡೆಯುವ ಜಿಲ್ಲಾ ಸಿ. ಐ. ಟಿ. ಯು. ಸಮ್ಮೇಳನವನ್ನು ಯಶಸ್ವಿಗೊಳಿಸಲು ಹೆಚ್ಚಿನ ಸಂಖ್ಯೆಯಲ್ಲಿ ಬೀಡಿಕಾರ್ಮಿಕರು ಸಹಕರಿಸಲೂ ಕರೆ ನೀಡಿದರು.

ರಾಘವ ಅಂಚನ್‌ರು ಧನ್ಯವಾದವಿತ್ತ ಬಳಿಕ ಸಭೆ ಮುಕ್ತಾಯವಾಯಿತು.

○

ಮಂಗಳೂರು :

ಲಾಕೌಟನ್ನು ಪ್ರತಿಭಟಿಸಿ ಹೋರಾಟ!

ಸೌತ್ ಕೆನರಾ ಟ್ರ್ಯಾಲ್ ವರ್ಕರ್ಸ್ ಯೂನಿಯನಿನ ಕಾರ್ಯಕಾರೀ ಸಮಿತಿ ಸಭೆಯು ತಾ. 10-3-1980 ರಂದು ಯೂನಿಯನಿನ ಉಪಾಧ್ಯಕ್ಷ ಶ್ರೀ ಕೆ. ಮೂಸಬ್ಬನವರ ಅಧ್ಯಕ್ಷತೆಯಲ್ಲಿ ಜರಗಿತು.

ಕಳೆದ ತಾ. 4-3-1980 ರಿಂದ ಕುದ್ರೋಳಿ ಕಾಮನ್‌ವೆಲ್ತ್ ಹಂಚಿನ ಕಾರ್ಖಾನೆಯ ಗೇಟಿಗೆ ಬೀಗಮುದ್ರೆ ಜಡಿದು "ಲಾಕೌಟುಸಾರಿ" ಸಾಧಾರಣ 300 ಕ್ಕಿಂತಲೂ ಮಿಕ್ಕಿದ ಅಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಉಪವಾಸಕ್ಕೀಡುಮಾಡಿದ ಮೆನೇಜುಮೆಂಟಿನ ನೀತಿಯನ್ನು ಸಭೆಯು ತೀವ್ರವಾಗಿ ಖಂಡಿಸಿತು.

ಕೂಡಲೇ ಲಾಕೌಟನ್ನು ಹಿಂತೆಗೆದುಕೊಂಡು ಕೆಲಸ ಪ್ರಾರಂಭಿಸುವಂತೆ ಮೆನೇಜುಮೆಂಟನ್ನು ಅಂತೆಯೇ ಸರಕಾರದ ಲೇಬರ್ ಇಲಾಖೆಯನ್ನು ಒತ್ತಾಯಿಸಲು ಸಭೆಯು ನಿರ್ಧರಿಸಿತು. ಅಲ್ಲದೆ ನಾಲ್ಕು ವರ್ಷಗಳಿಂದ ಕಾರ್ಮಿಕರ ಕೇಳಿಕೆಗಳು ಇತ್ಯರ್ಥಗೊಳ್ಳದೆ ಇರುವುದನ್ನು ಕೂಡಲೇ ಬಗೆಹರಿಸಬೇಕೆಂದೂ, ಅನ್ಯಾಯವಾಗಿ "ಲಾಕೌಟು" ಮಾಡಿದ ದಿನದಿಂದ ಕಾರ್ಮಿಕರಿಗೆ ಪರಿಹಾರ ನೀಡಬೇಕೆಂದೂ. ಮೆನೇಜುಮೆಂಟು ಹಾಗೂ ಸರಕಾರವನ್ನು ಒತ್ತಾಯಿಸಲೂ ಸಭೆ ತೀರ್ಮಾನಿಸಿತು. ಕೆಲಸವಿಲ್ಲದ ಕುದ್ರೋಳಿ ಕಾಮನ್‌ವೆಲ್ತ್ ಕಾರ್ಖಾನೆಯ ಕಾರ್ಮಿಕರಿಗೆ ಸರ್ವರೀತಿಯ ನೆರವನ್ನು ನೀಡಬೇಕೆಂದು ಈ ಬಗ್ಗೆ ಸಭೆ ಮೆರವಣಿಗೆಗಳನ್ನು ನಡೆಸುವುದು ಮತ್ತು ಅವಶ್ಯಬಿದ್ದರೆ ಹಂಚಿನ ಕೈಗಾರಿಕೆಯಲ್ಲಿ ಒಂದು ದಿನದ ಮುಷ್ಕರವನ್ನೂ ನಡೆಸಿ ಸರಕಾರವನ್ನು ಒತ್ತಾಯಿಸಬೇಕೆಂದು ಸಭೆ ತೀರ್ಮಾನ ಕೈಗೊಂಡಿತು.

○

ಪೋಲೀಸ್ ದೌರ್ಜನ್ಯದ ಖಂಡನೆ

ಮೈಸೂರು ಡಿಸ್ಟ್ರಿಕ್ಟ್ ಲಾರಿ ಆಂಡ್ ಮೋಟಾರ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ ತಾ. 8-3-80 ರಂದು ಸಂಜೆ 6ಗಂಟೆಗೆ ಸಂತೇಪೇಟೆಯ ಬನುಮಯ್ಯ ಚೌಕ, ಜಗನ್‌ಮೋಹನ ಪ್ಯಾಲೇಸ್ ಚೌಕ, ದೇವರಾಜ ಅರಸ್ ರಸ್ತೆಗಳಲ್ಲಿ ಸಭೆಗಳನ್ನು ನಡೆಸಿ ತಾ. 7-3-80ರಂದು ಲಾರಿ ಡ್ರೈವರ್ ಮತ್ತು ಕೂಲಿಗಾರರ ಮೇಲೆ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸಲಾಯಿತು. ಮತ್ತು ನಲ್ಲಪಠಾಣ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್‌ರವರ ಈ ವರ್ತನೆಯನ್ನು ಖಂಡಿಸಿ ಇನ್ನು ಮುಂದೆ ಈ ರೀತಿ ವರ್ತಿಸಿದಲ್ಲಿ ನಿಮ್ಮ ವಿರುದ್ಧ ಚಳುವಳಿ ನಡೆಸುವ ಕಾರ್ಯಕ್ರಮ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿ ಸಭೆಯನ್ನು ಉದ್ದೇಶಿಸಿ ಸಂಘದ ಕಾರ್ಯದರ್ಶಿ ಕಾಂ. ಎಂ. ಶೇಕರ್‌ರವರು ಮಾತನಾಡಿದರು.

○

ಕುಂದಾಪುರದಲ್ಲಿ ಯುವಜನ ಸಭೆ

ತಾ.18-3-80ರಂದು ಕುಂದಾಪುರದಲ್ಲಿ ಸಹಾ ತಾಲ್ಲೂಕು ಯುವಜನರ ಸಭೆ ನಡೆಯಿತು. ಕಾಂ. ವೆಂಕಟೇಶ್ ನಾಯಕ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಸಭೆಯ ಮುಂದೆ ಕಾಂ ಕೆ. ಶಂಕರ್‌ರವರು ಸಂಘಟನಾ ವರದಿಯನ್ನು ನೀಡಿ, ಚಟುವಟಿಕೆಗಳನ್ನು ವಿವರಿಸಿದರು.

ಆಂಧ್ರದಲ್ಲಿ ಸಿ ಪಿ ಐ (ಎಂ) ಕಾರ್ಯಕರ್ತರ ಕೊಲೆ

ಆಂಧ್ರದ ವಾರಂಗಲ್ ಜಿಲ್ಲೆಯ ನರಸಂಪೇಟೆಯ ಪೋಲೀಸ್ ಠಾಣೆಯ ಬಳಿ ಸಿ ಪಿ ಐ (ಎಂ) ಕಾರ್ಯಕರ್ತರಾದ, ಕೊಯಾ ಗಿರಿಜನರಾದ ಮೋಕಲ್ಲ ಚಿನ್ನರಾಮು ನರಸಯ್ಯ ಎಂಬುವರನ್ನು ಫೆಬ್ರುವರಿ 24ರಂದು ಕಾಂಗ್ರೆಸ್ (ಐ) ಮತ್ತು ನಕ್ಸಲ್‌ವಾದಿ ಜನರು ಕೊಂದು ಹಾಕಿದ್ದಾರೆ. ಕಳೆದ ಎರಡು ತಿಂಗಳಲ್ಲಿ ನರಸಂಪೇಟೆ ಪೋಲೀಸ್ ವಲಯದಲ್ಲಿ ನಡೆಯುತ್ತಿರುವ ಕೊಲೆಗಳಲ್ಲಿ ಇದು ಆರನೆಯದಾಗಿದೆ. ನರಸಂಪೇಟೆಯ ಹಳ್ಳಿಗರನ್ನು ಪೋಲೀಸರು, ಕಾಂಗ್ರೆಸ್ (ಐ) ಕಾರ್ಯಕರ್ತರು, ಭೂಮಾಲೀಕರ ಗೂಂಡಾಗಳು ಮತ್ತು ನಕ್ಸಲ್‌ವಾದಿಗಳು ಹಿಂಸಿಸಿ, ಅವರಲ್ಲನ ಸಿ.ಪಿ.ಐ (ಎಂ) ಕಾರ್ಯಕರ್ತರಿಗೆ ಹೊಡೆಯುತ್ತಿದ್ದಾರೆ. ಈ ಕೆಲಸಕ್ಕೆ ಭೂಮಾಲೀಕರು, ಮಂತ್ರಿಗಳು, ಉನ್ನತ ಪೋಲೀಸ್ ಅಧಿಕಾರಿಗಳು ಎಲ್ಲರ ಬೆಂಬಲ ಇದೆ. ಎರಡುಬಾರಿ ಹಳ್ಳಿಗೋಗಾದ ಸಿ.ಪಿ.ಐ (ಎಂ)ನ ವಿಧಾನಸಭಾ ಸದಸ್ಯ ಕಾಂ. ಓಂಕಾರ್ ಅವರು ಸರ್ಕಾರ ಇಂಥ ಹಲ್ಲೆಗಳನ್ನು ನಿಲ್ಲಿಸುವಂತೆ ಒತ್ತಾಯಿಸಿದ್ದಾರೆ.

●

ಎ.ಕೆ.ಜಿ. ಸಕ್ರಿಯವಾಗಿ ಭಾಗವಹಿಸಿದ ಮೊದಲ ಸತ್ಯಾಗ್ರಹ

[ಒಂದನೇ ಪುಟದಿಂದ]

ಡಗಿದರು. ಇದರಿಂದ ಕಾಂಗ್ರೆಸ್ ಒಳಗೆ ಧೃವೀಕರಣ ಪ್ರಾರಂಭವಾಯಿತು. ಶ್ರೀ ಕಾಳಪ್ಪನ್, ಕಾಂ. ಎ. ಕೆ. ಜಿ. ಗುಂಪನ್ನು ಬೆಂಬಲಿಸಿದ್ದಲ್ಲದೆ ನಾಯಕತ್ವವನ್ನೂ ವಹಿಸಿದರು. ಹೀಗಾಗಿ ದೇವಸ್ಥಾನ ಪ್ರವೇಶಕ್ಕಾಗಿ ಪ್ರಚಾರ ಪ್ರಾರಂಭವಾಯಿತು

ಗುರುವಾಯೂರು ಹೋರಾಟಕ್ಕೆ ಮೊದಲು ಅನೇಕ ಸಣ್ಣಪುಟ್ಟ ಚಳುವಳಿಗಳು ಪ್ರಾರಂಭವಾಗಿದ್ದವು. ಅವುಗಳಲ್ಲಿ ತಳ್ಳಿಚೇರಿಯಲ್ಲಿ ನಡೆದ ಕ್ಯಾಂಡೋತ್ ಪ್ರಕರಣವನ್ನು ಎ. ಕೆ. ಜಿ. ದಾಖಲು ಮಾಡಿದ್ದಾರೆ. ಕ್ಯಾಂಡೋತ್‌ನಲ್ಲಿ ರಸ್ತೆ ಬದಿಯಲ್ಲಿ ಒಂದು ಶೈವ ದೇವಸ್ಥಾನವಿತ್ತು. ಆದ ಕಾರಣ ಹರಿಜನರು ಆ ರಸ್ತೆಯಲ್ಲಿ ಓಡಾಡಬಾರದೆಂಬ ನಿರ್ಬಂಧವಿತ್ತು. ಎ. ಕೆ. ಜಿ. ಯವರು ಈ ರಸ್ತೆಯ ಮೂಲಕ ಹರಿಜನರ ಒಂದು ಮೆರವಣಿಗೆಯನ್ನು ವ್ಯವಸ್ಥೆ ಮಾಡಿದರು. ಸ್ಥಳೀಯ ಮುಖಂಡರು ಮೆರವಣಿಗೆಯನ್ನು ತೆಗೆದುಕೊಂಡು ಹೋಗುವುದಕ್ಕೆ ಒಪ್ಪಿದಂತೆ ಕಾಣುತ್ತೆ. ಆದರೆ ಮೆರವಣಿಗೆ ಸ್ಥಳವನ್ನು ತಲುಪಿದ ತಕ್ಷಣ ಜನರೆಲ್ಲರೂ ಸೇರಿ ಎ. ಕೆ. ಜಿ. ಮತ್ತು ಮೆರವಣಿಗೆಗಾರರನ್ನು ಇಟ್ಟಿಗೆ ಚೂರು ಮುಂತಾದವುಗಳನ್ನು ಬೀಸಿ ಹೊಡೆಯಲಾರಂಭಿಸಿದರು. ಪ್ರಜ್ಞಾಹೀನರಾಗಿ ಬಿದ್ದಿದ್ದ ಎ. ಕೆ. ಜಿ. ಯವರನ್ನು ಆಸ್ಪತ್ರೆಗೆ ಸೇರಿಸಲಾಯಿತು.

ಗುರುವಾಯೂರು ಹೋರಾಟಕ್ಕೆ ತೀವ್ರವಾದ ಸಿದ್ಧತೆಗಳನ್ನು ಮಾಡಲಾಯಿತು. 21ನೇ ಅಕ್ಟೋಬರ್ 1931 ರಂದು ಕ್ಯಾಲಿಕಟ್‌ನಿಂದ ಗುರುವಾಯೂರ್‌ಗೆ (ಸುಮಾರು 100 ಮೈಲಿ) ಮೆರವಣಿಗೆ ಹೊರಟಿತು. ಮೆರವಣಿಗೆಯಲ್ಲಿದ್ದ ಸತ್ಯಾಗ್ರಹಿಗಳನ್ನು ದಾರಿಯುದ್ದಕ್ಕೂ ಬಡಜನತೆ ಹಾಗೂ ಮಧ್ಯಮ ವರ್ಗದವರು ಸ್ವಾಗತಿಸಿದರು. ಬಡವರು ಕಾಂಗ್ರೆಸ್ಸಿನ ಬಗ್ಗೆ ತಮ್ಮ ಮನೋಭಾವವನ್ನು ಬದಲಾಯಿಸಿ ಹೋರಾಟಕ್ಕೆ ಸೇರಿದರು.

ಗುರುವಾಯೂರು ದೇವಸ್ಥಾನದ ಅಧಿಕಾರಿಗಳು ತಮ್ಮ ದೇವರಿಗೆ ಪ್ಯಾಲಿಗೆಯಾಗುವುದನ್ನು ತಡೆಯಲು ದೇವಸ್ಥಾನದ ಸುತ್ತಲೂ ಮುಳ್ಳು ತಂತಿಯನ್ನು ಹಾಕಿದರು. ಸತ್ಯಾಗ್ರಹಿಗಳು ಶ್ರೀ ಕೃಷ್ಣನನ್ನು ಕುರಿತು ಹಾಡುಗಳನ್ನು ಹಾಡುತ್ತಾ, ಶ್ರೀಕೃಷ್ಣನಿಗೆ 'ನಿನಗೆ ಹರಿಜನರು ಸಮೀಪವಾಗುವುದು ಬೇಡವೇ? ನಿನಗೆ ಹರಿಜನ ಭಕ್ತರು ಬೇಕೋ ಅಥವಾ ಸೈನಿಕರು ಮತ್ತು ಮುಳ್ಳುಬೇಲಿ ಬೇಕೋ' ಎಂದು ಹಾಡುತ್ತಿದ್ದರು.

ಸ್ವಯಂಸೇವಕರು ದೇವಸ್ಥಾನದ ಮುಖ್ಯ ದ್ವಾರದ ಎದುರು ಸತ್ಯಾಗ್ರಹ ಕುಳಿತರು, ಅಲ್ಲಿಗೆ ಭೇಟಿ ನೀಡುವವರಿಗೆ ದೇವಸ್ಥಾನಕ್ಕಿಂತ ಸತ್ಯಾಗ್ರಹಿಗಳ ಶಿಬಿರಗಳೇ ಎದ್ದು ಕಾಣುತ್ತಿದ್ದವು. ದೇಶಾದ್ಯಂತ ಗುರುವಾಯೂರು ಸತ್ಯಾಗ್ರಹ ಪ್ರಚಾರ ಪಡೆಯಿತು. ಜನವರಿ 4, 1932 ರಂದು ಸರಕಾರ ನಾಗರೀಕ ಹಕ್ಕುಗಳನ್ನು ರದ್ದು ಮಾಡಿದ ಕಾರಣ ಸತ್ಯಾಗ್ರಹವನ್ನು ಯಶಸ್ವಿಯಾಗಿ ಮುಂದುವರಿಸುವುದೇ ಕಷ್ಟವಾಯಿತು. ತಾ. 5-1-1932 ರಂದು ಕಾಂ. ಎ. ಕೆ. ಜಿ. ಹಾಗೂ ಇನ್ನಿಬ್ಬರನ್ನು ಬಂಧಿಸಿ ಆರು ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು.

ಮಲಬಾರ್ ಪ್ರಾಂತ್ಯದಲ್ಲಿ ಕಾಂಗ್ರೆಸ್ಸಿನಲ್ಲಿ ಧೃವೀಕರಣವನ್ನು ತರುವಲ್ಲಿ ಗುರುವಾಯೂರು ಸತ್ಯಾಗ್ರಹ ಮಹತ್ವ ಪಡೆದಿದೆ. ಬಡಜನತೆಯನ್ನು ಕಾಂಗ್ರೆಸ್ಸಿಗೆ ತರಲು ಸಹಾ ಸತ್ಯಾಗ್ರಹ ಸಹಾಯಕವಾಯಿತು.

ಗುರುವಾಯೂರು ಸತ್ಯಾಗ್ರಹದಂಥ ಕಾರ್ಯಕ್ರಮ ಹಾಗೂ ಕೃಷಿಕಾರ್ಮಿಕರ ಚಳುವಳಿಗಳು ಕೇರಳದಲ್ಲಿ ಕಾಂಗ್ರೆಸ್‌ನಿಂದ, ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಹಾಗೂ ಅಂತಿಮವಾಗಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ, ಬೆಳೆಸುವುದಕ್ಕೆ ಸಹಾಯಕವಾದವು.

ಕಾಂ. ಎ. ಕೆ. ಜಿ. ಯವರು ಬೆಳೆಸಿ, ನಾಯಕತ್ವ ವಹಿಸಿ, ಜಯಗಳಿಸಿದ ಅನೇಕ ಹೋರಾಟಗಳಲ್ಲಿ ಗುರುವಾಯೂರು ಸತ್ಯಾಗ್ರಹ ಮೊಟ್ಟಮೊದಲನೆಯದು.

—ವಿ. ಜೆ. ಕೆ. ನಾಂಬಿಯರ್

●

ಸ್ಟೈಪೆಂಡರಿ ಪದವೀಧರರ "ಜೈಲಿನಿಂದ ಕರಪತ್ರ"

ಕರ್ನಾಟಕ ರಾಜ್ಯ ಸ್ಟೈಪೆಂಡರಿ ಪದವೀಧರರು ನ್ಯಾಯಯುತ ಬೇಡಿಕೆಗಳ ಹೋರಾಟಕ್ಕೆ ಅನುಗುಣವಾಗಿ ಮಾರ್ಚಿ ಮೂರರಂದು "ವಿಧಾನ ಸೌಧ ಚಲೋ" ಕಾರ್ಯಕ್ರಮ ಹಾಕಿಕೊಂಡಿದ್ದರು. 10,000 ಜನ ಪದವೀಧರರು ಇದರಲ್ಲಿ ಭಾಗವಹಿಸಿದ್ದರು. ಶಾಂತ ರೀತಿಯ ಈ ಪ್ರದರ್ಶನದಲ್ಲಿ ಪೋಲೀಸರ ದಬ್ಬಾಳಿಕೆ ನಡೆಯಿತು. ಲಘುಬೆತ್ತ ಪ್ರಹಾರ ನಡೆಸಿ, 300 ಮಂದಿ ಪದವೀಧರರನ್ನು ಬಂಧಿಸಿದರು. ಈ ಬಂಧಿತರ ಬಿಡುಗಡೆಗಾಗಿ ಜನತೆ, ನೌಕರ ವರ್ಗ ಮತ್ತು ವಿದ್ಯಾರ್ಥಿಗಳು ಹೋರಾಡುವರೆಂದು ಕರಪತ್ರ ಆಶಿಸಿದೆ.

ಕೋಣಿಯಲ್ಲಿ ವಯಸ್ಕರ ಶಿಕ್ಷಣ ಕೇಂದ್ರದ ಉದ್ಘಾಟನೆ

ದ.ಕ. ಜಿಲ್ಲೆ ಕುಂದಾಪುರ ತಾಲ್ಲೂಕಿನ ಕೋಣಿಯಲ್ಲಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯನ್ವಯ ಕೇಂದ್ರವೊಂದು ಆರಂಭವಾಯಿತು. ಈ ಕೇಂದ್ರವನ್ನು ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜು ವಿದ್ಯಾರ್ಥಿಗಳು ಸಾಂತಾವರ ಮತ್ತು ಕೋಣಿ ಯುವಕ ಮಂಡಲಗಳ ಸಹಕಾರದಲ್ಲಿ ನಡೆಯುತ್ತದೆ. ಶಿಕ್ಷಣ ಕೇಂದ್ರದ ಉದ್ಘಾಟನೆಗೆ ನಡೆದ ಸಭೆಯ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯ್ತಿ ಸದಸ್ಯ ಶ್ರೀ ಕೃಷ್ಣ ಉಗ್ರಾಣಿ ವಹಿಸಿದ್ದರು ಕೇಂದ್ರವನ್ನು ಎಸ್. ಎನ್. ಹೆಬ್ಬಾರ್ ಅವರು ಉದ್ಘಾಟಿಸಿದರು. ಸಭೆಯಲ್ಲಿ ಶ್ರೀ ಜನಾರ್ಧನ ಹೆಬ್ಬಾರ್, ಎಚ್. ವಿ. ನರಸಿಂಹಮೂರ್ತಿ, ಸೀತಾರಾಮ್ ಹೆಬ್ಬಾರ್ ಅವರುಗಳು ಮಾತನಾಡಿದರು. ವಿದ್ಯಾರ್ಥಿ ಶಿಕ್ಷಕ ಶ್ರೀ ಶಂಭು ಬನ್ನಾಡಿ ವಂದನಾರ್ಪಣೆ ಮಾಡಿದರು.

●

ಕೇರಳದಲ್ಲಿ ಎಸ್. ಎಫ್. ಐ. ರಾಜ್ಯ ಸಮ್ಮೇಳನ

ಭಾರತ ವಿದ್ಯಾರ್ಥಿ ಫೆಡರೇಶನ್ನಿನ ಕೇರಳ ರಾಜ್ಯ ಘಟಕವು ಪುನಲೂರಿನಲ್ಲಿ ಸಮ್ಮೇಳನವನ್ನು ಏರ್ಪಡಿಸಿತ್ತು. ಪ್ರತ್ಯೇಕವಾಗಿ ನಿರ್ಮಿತವಾಗಿದ್ದ "ಕೆ. ಪಿ. ರಾಜನ್" ನಗರದಲ್ಲಿ ಮಾರ್ಚಿ 7 ರಿಂದ 9ರವರೆಗೆ ಸಮ್ಮೇಳನ ನಡೆಯಿತು. ಶಿಕ್ಷಣರಂಗದ ಸಮಸ್ಯೆಗಳ ಪರಿಶೀಲನೆಗೆ ನೇಮಕವಾಗಿರುವ ಆಯೋಗದಲ್ಲಿ ವಿದ್ಯಾರ್ಥಿ–ಅಧ್ಯಾಪಕ ಸಂಘಟನೆಗಳ ಪ್ರತಿನಿಧಿಗಳು ಇರಬೇಕೆಂದು ಸಮ್ಮೇಳನ ಕೋರಿತು. ಮಾರ್ಚಿ 9ರ ಬಹಿರಂಗ ಅಧಿವೇಶನವನ್ನು ರಾಜ್ಯದ ಮುಖ್ಯಮಂತ್ರಿ ಕಾಂ. ಇ. ಕೆ. ನಯನಾರ್ ಉದ್ಘಾಟಿಸಿದರು. ರಾಜ್ಯ ಸಮಿತಿಗೆ ಕಾಂ. ಎ. ಕೆ. ಬಾಲನ್ ಎಂ. ಪಿ. ಅಧ್ಯಕ್ಷರಾಗಿಯೂ ಕಾಂ. ಪಿ. ಶಶಿ, ಕಾರ್ಯದರ್ಶಿಯಾಗಿಯೂ ಚುನಾಯಿತರಾದರು. ಕೇರಳದ ಹೊಸರಾಜಕೀಯ ಪಕ್ಷಗಳ ಮೈತ್ರಿಯನ್ನು ಪಯೋಗಿಸಿಕೊಂಡು, ಎಡ-ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟನ್ನು ಬಲಪಡಿಸಲು ಶ್ರಮಿಸಬೇಕೆಂದು, ಇದಕ್ಕೆ ಉಚಿತವಾದ ಕಾರ್ಯಕ್ರಮಗಳನ್ನು ಪುನಲೂರ್ ಸಮ್ಮೇಳನ ರಚಿಸಬೇಕೆಂದು ಕಾಂ. ಇ. ಎಂ. ಎಸ್. ನಂಬೂದಿರಿಪಾದ್ ಸಂದೇಶ ಕಳಿಸಿದ್ದರು.

●

ಸಂಪಾದಕೀಯ

[ಒಂದನೇ ಪುಟದಿಂದ]

ಕಾರಕ್ಕೆ ಕೊಡಬೇಕಾದ ಪರಿಹಾರ ಹಣವನ್ನು ಕಟ್ಟಲು ಸಾಧ್ಯವೆಂಬುದನ್ನು ಹೇಳಲು ಸಾಧ್ಯವಿಲ್ಲ. ಪರಿಹಾರವಿಲ್ಲದೆಯೇ ಗೇಣಿದಾರರಿಗೆ ಅವರು ಸಾಗುವಳಿ ಮಾಡುತ್ತಿದ್ದ ಜಮೀನನ್ನು ಕೊಡಬೇಕೆಂದು ರೈತಸಂಘ ಹಿಂದಿನಿಂದಲೂ ಒತ್ತಾಯ ಮಾಡಿತ್ತು. ಈಗ ಅವನಿಗೆ ಕೂಡಲೇ ಪಟ್ಟಾ ಕೊಡುವ ನೆಪದಲ್ಲಿ ಅವನಿಂದ ನೂರು ರೂಪಾಯಿ ವಸೂಲು ಮಾಡುವುದರಲ್ಲಿ ಯಾವ ನ್ಯಾಯವಿದೆ? ಸರಕಾರ ರೈತರಿಗೆ ಪಟ್ಟಾಕೊಡುವುದನ್ನು ಕೂಡಲೇ ಕೊಡಲಿ. ಆದರೆ ಅದಕ್ಕೆ ಹಣವಸೂಲು ಮಾಡುವುದನ್ನು ನಿಲ್ಲಿಸಲಿ. ಇಲ್ಲದಿದ್ದರೆ ಈ ಯೋಜನೆಯು ಬಡ ಗೇಣಿದಾರರಿಗೆ ಘಾಯದ ಮೇಲೆ ಬರೆ ಎಳೆದಂತಾದೀತು. ರೆವೆನ್ಯೂ ಸಚಿವ ಶ್ರೀ ಬಂಗಾರಪ್ಪನವರು ಇದರ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳುವರೆಂದು ನಿರೀಕ್ಷಿಸಬಹುದೇ ?

○

ಐಕ್ಯರಂಗ ವಾರಪತ್ರಿಕೆಯು ಮೇ ವಿಶೇಷಾಂಕವು ಮೇ ತಿಂಗಳ ಎರಡನೇ ವಾರದಲ್ಲಿ ಪ್ರಕಟವಾಗಲಿದೆ. ಪ್ರಗತಿಪರ ಲೇಖನಗಳು, ವ್ಯಂಗ್ಯ ಚಿತ್ರಗಳು ಮೊದಲಾದುವುಗಳನ್ನು ಸ್ವೀಕರಿಸಲಾಗುವುದು. ಓದುಗರು ಮತ್ತು ಹಿತೈಷಿಗಳು ಜಾಹೀರಾತುಗಳನ್ನು ಕಳುಹಿಸುವುದರ ಮೂಲಕ ಪತ್ರಿಕೆಗೆ ಸಹಕರಿಸಬೇಕೆಂದು ಕೋರಲಾಗಿದೆ.

ಸಂಪಾದಕ ಮಂಡಳಿ

ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯಸಮಿತಿ ಸಭೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿ ಸಭೆಯು ಮಾರ್ಚ್ ೨೮,೨೯ಮತ್ತು ೩೦ ರಂದು ಬೆಂಗಳೂರಿನಲ್ಲಿ ಸೇರಲಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾದ್‌ರವರೂ ಭಾಗವಹಿಸಲಿರುವರು. ೩೦ರ ಸಂಜೆ ಚಿಕ್ಕಲಾಲ್‌ಬಾಗ್‌ನಲ್ಲಿ ನಡೆಯಲಿರುವ ಬಹಿರಂಗ ಸಭೆಯಲ್ಲೂ ಕಾಂ. ಇ. ಎಂ. ಎಸ್. ಮಾತನಾಡಲಿರುವರು.

ಎಂ. ಕೆ. ಭಟ್
ಕಾರ್ಯದರ್ಶಿ
ಕರ್ನಾಟಕ ರಾಜ್ಯಸಮಿತಿ

ಎಸ್. ಎಫ್. ಐ. ರಾಜ್ಯಸಮಿತಿ ಸಭೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ರಾಜ್ಯ ಸಮಿತಿಯು ದಿನಾಂಕ 31-3-80 ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನಲ್ಲಿ ಸಭೆ ಸೇರಲಿದ್ದು ಈ ಸಭೆಗೆ ಎಲ್ಲ ಸದಸ್ಯರು ಮತ್ತು ಆಹ್ವಾನಿತರು ತಪ್ಪದೆ ಬರಬೇಕಾಗಿ ವಿನಂತಿ.

ಶಾಂತರೇಣುಕಾರಾಧ್ಯ
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ಶಾಖೆ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 3 .154
EDITOR : M. K. BHAT